# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 148 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 12.12.2024 • ಗುರುವಾರ • ಪುಟ:04 • ಬೆಲೆ:2
Volume:02 • Issue: 148 • PRGI No:KARKAN/2023/88055 • VIJAYANAGARA • 12.12.2024 • Thursday • Page:04 • Rs:2









ಸುದ್ದಿ, ಜಾಹೀರಾತು,
ಜಾಗೃತಿ ಪ್ರಕಟಣೆಗಳ ಪ್ರಕಟಣೆಗಾಗಿ
ಸಂಪರ್ಕಿಸಿ
ಮೊ: 9448633038
e-mail: hampitimes@gmail.com


ಮೈಕ್ರೋ ನ್ಯೂಸ್

## ಇಂದು ಪಂಚಮಸಾಲಿ ಸಮಾಜದಿಂದ ಪ್ರತಿಭಟನೆ

**ಹಂಪಿ ಟೈಮ್ಸ್ ಹೊಸಪೇಟೆ**

ಬೆಳಗಾವಿಯಲ್ಲಿ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಕೋರಿ ಕೈಗೊಂಡ ಹೋರಾಟದಲ್ಲಿ ಲಾಠಿ ಚಾರ್ಜ್ ನಡೆಸಿ ಪಂಚಮಸಾಲಿ ಸಮಾಜದ ಶಕ್ತಿಯನ್ನು ಹತ್ತಿಕ್ಕುವ ಮುಖ್ಯಮಂತ್ರಿಗಳ ಹುನ್ನಾರವನ್ನು ಖಂಡಿಸಿ ಡಿ.12ರಂದು ಜಿಲ್ಲೆ ಸೇರಿದಂತೆ ರಾಜ್ಯಾದ್ಯಾಂತ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಯುವ ಘಟಕದ ರಾಜ್ಯಾಧ್ಯಕ್ಷ ಕೊಟ್ರೇಶ್ ಕಿಚಡಿ ತಿಳಿಸಿದ್ದಾರೆ.

# ಫಲಿತಾಂಶ ಹೆಚ್ಚಳಕ್ಕೆ ಕಲಿಕಾಸಕ್ತಿ ಇಮ್ಮಡಿಗೊಳಿಸಿ

### ಡಿಸಿಪಿಐ ವೆಂಕಟೇಶ ರಾಮಚಂದ್ರಪ್ಪ ಶಿಕ್ಷಕರಿಗೆ ಸೂಚನೆ | ಹಗರಿಬೊಮ್ಮನಹಳ್ಳಿಯಲ್ಲಿ ಸಮಾಜ ವಿಜ್ಞಾನ ಪ್ರೌಢಶಾಲಾ ಶಿಕ್ಷಕರ ಕಾರ್ಯಾಗಾರ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಮಕ್ಕಳನ್ನು ವಿಷಯ ಚರ್ಚೆಗೆ ಪ್ರೇರೇಪಿಸಿ ಮಕ್ಕಳಲ್ಲಿ ಕಲಿಕಾಸಕ್ತಿ ಇಮ್ಮಡಿ ಗೊಳಿಸುವ ನಿಟ್ಟಿನಲ್ಲಿ ಮಕ್ಕಳ ಮನೋಸ್ಥಿತಿ ಅರಿತು, ಅಗತ್ಯ ಸಾಂದರ್ಭಿಕ ಉದಾಹರಣೆ ಹಾಗೂ ತಂತ್ರಜ್ಞಾನದ ಸಹಾಯದೊಂದಿಗೆ ಮಕ್ಕಳು ಅರ್ಥೈಸಿಕೊಳ್ಳುವ ರೀತಿಯಲ್ಲಿ ಶಿಕ್ಷಕರು ಬೋಧನೆ ಮಾಡಬೇಕು ಎಂದು ಡಿಸಿಪಿಐ ವೆಂಕಟೇಶ ರಾಮಚಂದ್ರಪ್ಪ ಹೇಳಿದರು.

ಪಟ್ಟಣದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಸಭಾಂಗಣ ದಲ್ಲಿ ನಡೆದ ಜಿಲ್ಲಾ ಮಟ್ಟದ ಸಮಾಜವಿಜ್ಞಾನ ಪ್ರೌಢ ಶಾಲಾ ಶಿಕ್ಷಕರ ಕಾರ್ಯಾಗಾರವನ್ನು ಸೋಮವಾರ ಉದ್ಘಾಟಿಸಿ ಮಾತನಾಡಿದರು. ಎಸ್ಸೆಸ್ಸೆಲ್ಸಿ ಫಲಿತಾಂಶ ಹೆಚ್ಚಿಸಲು ಶಿಕ್ಷಕರು ತಮ್ಮನ್ನು ಸಮರ್ಪಕವಾಗಿ ತೊಡಗಿಸಿಕೊಂಡು, ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಹೆಚ್ಚಿನ ಆದ್ಯತೆ ನೀಡಿ ಪ್ರೋತ್ಸಾಹಿಸಬೇಕು. ಫಲಿತಾಂಶದ ಹಿಂದೆ ಪರಿಶ್ರಮವಿರುತ್ತದೆ ಎಂಬುದನ್ನು ಎಸ್ಸೆಸ್ಸೆಲ್ಸಿ ಫಲಿತಾಂಶವೇ ಸಾಕ್ಷೀಕರಿಸುತ್ತದೆ. ಸಮಾಜ ವಿಜ್ಞಾನ ಶಿಕ್ಷಕರ ಕಾರ್ಯಾಗಾರದಲ್ಲಿ ಶಿಕ್ಷಕರು ಪರಸ್ಪರ ಫಲಿತಾಂಶ ಹೆಚ್ಚಳಗೊಳ್ಳಲು ಬೇಕಾದ ಅಗತ್ಯ ಕ್ರಮಗಳನ್ನು ಚರ್ಚಿಸಿ ಸೂಕ್ತ ಪರಿಹಾರ ಕಂಡುಕೊಳ್ಳುವ ಮೂಲಕ ಕಾರ್ಯಾಗಾರವನ್ನು ಯಶಸ್ವಿಗೊಳಿಸಬೇಕು ಎಂದರು.



ಶಿವಮೊಗ್ಗ ಡಯಟ್ ಕಾಲೇಜಿನ ಉಪನ್ಯಾಸಕ ಹರಿಪ್ರಸಾದ್ ಮಾತನಾಡಿ, ಮಕ್ಕಳಲ್ಲಿ ಸ್ವಂತ ಆಲೋಚನೆ ಹೆಚ್ಚಿಸುವ ಪರಿಣಾಮಕಾರಿ ವಿಧಾನಗಳನ್ನು ಶಿಕ್ಷಕರು ಅನುಸರಿಸಬೇಕು. ಮಗುವಿನಲ್ಲಿ ಸ್ವಗೌರವ ಮೂಡಿಸುವ ಮೂಲಕ ರಾಷ್ಟ್ರೀಯ ಗುರಿ ಸಾಧನೆಗೆ ಶಿಕ್ಷಕರು ಒತ್ತು ನೀಡಬೇಕಿದೆ. ಪಠ್ಯಕ್ರಮ ನಿರ್ವಹಣೆ ಕುರಿತಂತೆ ಹಲವು ಮಹತ್ವದ ಬದಲಾವಣೆ ಅಗತ್ಯ. ಪಠ್ಯಕ್ಕೆ ಸಂಬಂಧಿಸಿದಂತೆ ಸ್ಥಳೀಯ ಆಡಳಿತ ಕಚೇರಿಗಳಿಗೆ ಮಕ್ಕಳ ಭೇಟಿ ಆಧುನಿಕ ಶಿಕ್ಷಣದಲ್ಲಿ ಮಹತ್ವ ಪಡೆದುಕೊಳ್ಳುತ್ತದೆ ಎಂದರು.

ಬಿಇಓ ಮೈಲೇಶ್ ಬೇವೂರ್ ಪ್ರಾಸ್ತಾವಿಕ ಮಾತನಾಡಿ, ಕಳೆದ ಸಾಲಿನಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ವಿಜಯನಗರ ಜಿಲ್ಲೆಯ ತಾಲೂಕು ಮಟ್ಟದಲ್ಲಿ ಮೊದಲ ಸ್ಥಾನದಲ್ಲಿದ್ದು, ಈ ಸಾಲಿನಲ್ಲಿಯೂ ಉತ್ತಮ ಸಾಧನೆ ಮಾಡಲಾಗುವುದು ಎಂದರು. ಬಿಆರ್‌ಸಿ ಪ್ರಭಾಕರ, ಅಕ್ಷರದಾಸೋಹ ಸಹಾಯಕ ನಿರ್ದೇಶಕ ರಾಜಕುಮಾರ ನಾಯ್ಕ, ತಾಲೂಕು ಸಮಾಜ ವಿಜ್ಞಾನ ಶಿಕ್ಷಕರ ಸಂಘದ ಅಧ್ಯಕ್ಷ ಕೊಟ್ರೇಶ್ ಮಾಳಗಿ, ಪ್ರೌಢಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷ ರವಿಚಂದ್ರನಾಯ್ಕ, ಬಿಆರ್‌ಪಿ ಪರಮೇಶ್ವರ ಸೊಪ್ಪಿಮಠ ಇತರರಿದ್ದರು. ಶಿಕ್ಷಕ ಅಕ್ಕಿ ಬಸವರಾಜ, ಮಹಾಂತೇಶ್ ಚುಂಗಿ, ಎಸ್ಸೆಸ್ಸೆಲ್ಸಿ ನೋಡೆಲ್ ಅಧಿಕಾರಿ ಎಸ್.ಎಂ. ಗುರುಬಸವರಾಜ ನಿರ್ವಹಿಸಿದರು. ವಿಜಯನಗರ ಜಿಲ್ಲೆಯ 253 ಸಮಾಜ ವಿಜ್ಞಾನ ಶಿಕ್ಷಕರು ಕಾರ್ಯಾಗಾರದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದರು.

# ನಿರ್ವಹಣೆ ನಿರ್ಲಕ್ಷ್ಯ ವಾರ್ಡನ್‌ಗಳಿಗೆ ನೋಟೀಸ್

### ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹಾಸ್ಟೆಲ್‌ಗಳಿಗೆ ಭೇಟಿ | ರಜೆಯ ಮಜದಲ್ಲಿದ್ದವರಿಗೆ ಶಾಕ್



**ಹಂಪಿ ಟೈಮ್ಸ್ ಹೊಸಪೇಟೆ**

ರಾಜ್ಯದ ಮಾಜಿ ಸಿಎಂ ಎಸ್ಎಂ ಕೃಷ್ಣ ಅವರ ನಿಧನದಿಂದಾಗಿ ರಾಜ್ಯ ಸರ್ಕಾರ ಬುಧವಾರ ಸರ್ಕಾರಿ ರಜೆ ಘೋಷಿಸಿತ್ತು. ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು, ರಜೆ ಎಂದು ಮನೆಯಲ್ಲಿ ಕುಳಿತುಕೊಳ್ಳದೇ, ಎಂದಿನಂತೆ ಕಾರ್ಯಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಕ್ಕೆ ಅನಿರೀಕ್ಷಿತವಾಗಿ ಭೇಟಿ ನೀಡಿ, ಪರಿಶೀಲಿಸಿ, ರಜೆಯ ಮಜದಲ್ಲಿ ಅಧಿಕಾರಿ, ಸಿಬ್ಬಂದಿಗಳಿಗೆ ಅಚ್ಚರಿಯೊಂದಿಗೆ ಬಿಸಿಮುಟ್ಟಿಸಿದ್ದಾರೆ.

ಜಿಲ್ಲಾಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ನಲ್ಲಿ ಹಾಜರಿದ್ದ ಮಕ್ಕಳೊಂದಿಗೆ ಮೂಲಭೂತ ಸೌಕರ್ಯ ಹಾಗೂ ಗುಣಮಟ್ಟದ ಊಟೋಪಹಾರ, ಕುಡಿಯುವ ನೀರು ಹಾಗೂ ಅಡುಗೆ ಕೋಣೆ ಸ್ವಚ್ಚತೆ ಪರಿಶೀಲಿಸಿ ಚರ್ಚಿಸಿದರು. ದಾಸ್ತಾನು ಕೊಠಡಿ ಪರಿಶೀಲಿಸಿ ದಾಸ್ತಾನು ವಹಿ ನಿರ್ವಹಿಸದೇ ಇರುವ ಹಾಗೂ ಹಾಸ್ಟೆಲ್ ಸ್ವಚ್ಚತೆ ಕಾಪಾಡಿ ಕೊಳ್ಳದೇ ಇರುವ ವಾರ್ಡನ್‌ಗಳಿಗೆ ಕಾರಣ ಕೇಳಿ ನೋಟೀಸ್ ನೀಡುವಂತೆ ಹಾಜರಿದ್ದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಜಿಲ್ಲೆಯ ಎಲ್ಲಾ ಹಾಸ್ಟಲ್‌ಗಳಲ್ಲಿ ಅನಿರೀಕ್ಷಿತ ಭೇಟಿ ನೀಡಿದಂತಹ ಸಂದರ್ಭದಲ್ಲಿ ಸಂಬಂಧಿಸಿದ ವಾರ್ಡನ್ ಹಾಗೂ ಅಧಿಕಾರಿಗಳು ನಿಯಮಾನುಸಾರ ಆಹಾರದ ಉತ್ತಮ ಗುಣಮಟ್ಟ ಹಾಗೂ ಸ್ವಚ್ಚತೆ ಕಾಪಾಡಿಕೊಳ್ಳುವಂತೆ ಖಡಕ್ ಎಚ್ಚರಿಕೆ ನೀಡಿದ್ದಾರೆ. ಜಿಲ್ಲಾಧಿಕಾರಿಗಳ ಸಾಮಾಜಿಕ ಕಾಳಜಿಗೆ ಜನ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

# ಕಾನಾಮಡುಗು ಶರಣಬಸವೇಶ್ವರ ರಥೋತ್ಸವ


### ಶ್ರೀ ಐಮಡಿ ಶರಣಾರ್ಯರ ಸಾನ್ನಿಧ್ಯ | ಜಯಘೋಷಗಳೊಂದಿಗೆ ಭಕ್ತಿ ಸಮರ್ಪಣೆ

**ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ಕಾನಮಡುಗು ದಾಸೋಹ ಮಠದ ಧರ್ಮಾಧಿಕಾರಿ ಐಮಡಿ ಶರಣಾರ್ಯರ ಸಾನ್ನಿಧ್ಯದಲ್ಲಿ ಪೂಜಾ ಕಾರ್ಯಕ್ರಮಗಳ ನಂತರ ಮಂಗಳ ವಾರ ಸಂಜೆ ಭಕ್ತರು ರಥವನ್ನು ಶ್ರೀ ಶರಣಬಸವೇಶ್ವರ ಮಹಾರಾಜ್ ಕೀ ಜೈ ಘೋಷಣೆಗಳೊಂದಿಗೆ ಎಳೆದರು. ರಥಕ್ಕೆ ಉತ್ತುತ್ತಿ, ಬಾಳೆಹಣ್ಣು, ಚೂರು ಮೆಣಸು ತೂರಿ ರಥಕ್ಕೆ ಭಕ್ತರು ಭಕ್ತಿ ಅರ್ಪಿಸಿದರು.



ಈ ಭಾಗದ ಬಯಲು ಸೀಮೆಯ ಶಿಕ್ಷಣಕಾಶಿ ಯಂದೇ ಜನನಿತವಾಗಿರುವ ಕಾನಮಡುಗಿನ ಶ್ರೀಶರಣಬಸವೇಶ್ವರ ಸ್ವಾಮಿಯ ಮಠದಲ್ಲಿ ತ್ರಿವಿಧ ದಾಸೋಹಕ್ಕೆ ಹೆಸರಾಗಿದೆ. ಮೀಸಲು ದೇವರೆಂದು ಪ್ರಸಿದ್ಧಯಾದ ಶರಣನಿಗೆ, ಧನ, ಧಾನ್ಯಗಳೊಂದಿಗೆ ಇತರೆ ವಸ್ತುಗಳನ್ನು ಮೀಸಲು ಕಟ್ಟುವುದು ಭಕ್ತರು ತಲೆತಲಾಂತರದಿಂದ ನಡೆದುಕೊಂಡು ಬಂದಿದೆ. ಹೀಗಾಗಿ, ಇಲ್ಲಿ ನಡೆಯುತ್ತಿರುವ ದಾಸೋಹ ನಿರಂತರವಾಗಿದೆ. ಜಾತಿ, ಮತ, ಬೇಧವಿಲ್ಲದೆ, ಭಕ್ತರು ಯಾರೇ ಬರಲಿ ಶರಣಬಸಪ್ಪನ ದಾಸೋಹದಲ್ಲಿ ಅನ್ನಕ್ಕೆ ಕೊರತೆಇಲ್ಲ. ಶರಣೇಶನಿಗೆ ಕಾರ್ತಿಕೋತ್ಸವವನ್ನು ಸೋಮವಾರ ನೆರವೇರಿಸಿದ ನಂತರ ಮರುದಿನವೇ ರಥೋತ್ಸವ ನಡೆಯುತ್ತದೆ. ಹೀಗಾಗಿ ಕಾನಮಡುಗಿನಲ್ಲಿ ಮೂರು ದಿನಗಳಕಾಲ ಹಬ್ಬವನ್ನು ಆಚರಿಸುತ್ತಾರೆ. ಬುಧವಾರ ಸಂಜೆ ಸ್ವಾಮಿಗೆ ಪಲ್ಲಕ್ಕಿ ಮಹೋತ್ಸವ ಜರುಗಿತು. ಸ್ಥಳೀಯ ಶಾಲಾ ಮಕ್ಕಳಿಂದ ಮನೋರಂಜನೆ ಕಾರ್ಯಕ್ರಮ, ನಾಟಕಗಳು, ಭರತನಾಟ್ಯ ನಡೆದವು. ಜಿಲ್ಲೆ ಸೇರಿದಂತೆ ನೆರೆಯ ಚಿತ್ರದುರ್ಗ, ದಾವಣಗೆರೆ, ನೆರೆ ರಾಜ್ಯದ ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ದಿಂದಲೂ ಭಕ್ತರು ಆಗಮಿಸಿದ್ದರು. ಕೂಡ್ಲಿಗಿ ಡಿವೈಎಸ್ಪಿ ಮಲ್ಲೇಶಪ್ಪ ಮಲ್ಲಾಪುರ ನಿರ್ದೇಶನದಲ್ಲಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು.



ಹಂಪಿ ಟೈಮ್ಸ್
HAMPI TIMES


# ಸ್ಟುಡೆಂಟ್ ಕಾಲಂ

## ವಿದ್ಯೆಯ ಮಹತ್ವ ತಿಳಿಸಿದ ಕುಟುಂಬ



ಬಸರಕೋಡು ಎಂಬ ಊರು. ಆ ಊರಲ್ಲಿ ಒಂದು ಚಿಕ್ಕ ಕುಟುಂಬ. ರಮೇಶ್ ಎಂಬ ಹುಡುಗನಿಗೆ ಅಪ್ಪ, ಅಮ್ಮ ಮತ್ತು ತಂಗಿ ಇದ್ದರು. ಅಪ್ಪನ ಹೆಸರು ಬಸವರಾಜ, ತಾಯಿ ಹೆಸರು ರೇಣುಕಾ, ತಂಗಿ ಹೆಸರು ಕಾವೇರಿ. ರಮೇಶನ ಅಮ್ಮ ಮತ್ತು ತಂಗಿ ಕೂಲಿ ಮಾಡುತ್ತಿದ್ದರು. ರಮೇಶನ ತಂದೆಗೆ 2 ಎಕರೆ ಜಮಿನು ಇತ್ತು. ರಮೇಶ ಮತ್ತು ತಂದೆ ಅದರಲ್ಲಿ ಕೆಲಸ ಮಾಡುತ್ತಿದ್ದರು. ರಮೇಶನ ಹೊಲದ ಪಕ್ಕದಲ್ಲಿ ಪಕ್ಕದ ಊರಿನ ಯಜಮಾನನ 108 ಎಕರೆ ಜಮೀನು ಇತ್ತು. ರಮೇಶ ಮತ್ತು ಬಸವರಾಜ ತಮ್ಮ ಜಮೀನಿನಲ್ಲಿ ಕೆಲಸ ಇಲ್ಲದಿದ್ದಾಗ ಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದರು.

ಬಸವರಾಜ ಮತ್ತು ರಮೇಶ ಇಬ್ಬರಿಗೂ ವಿದ್ಯೆ ಇರಲಿಲ್ಲ. ಶಾಲೆಗೆ ಹೋಗಿ ಕಲಿತಿರಲಿಲ್ಲ. ಏಕೆಂದರೆ ರಮೇಶನ ತಾತ ಬೇಸಾಯ ಮಾಡುತ್ತಿದ್ದನು. ಅದಕ್ಕೆ ಬಸವರಾಜನು 'ನಮ್ಮ ವಂಶದಲ್ಲಿ ಯಾರು ವಿದ್ಯಾಭ್ಯಾಸ ಮಾಡಿಲ್ಲ. ಅದಕ್ಕೆ ನೀನು ವಿದ್ಯೆಯನ್ನು ಬಿಟ್ಟು ಹೊಲದ ಕೆಲಸ ಮಾಡು' ಎಂದನು. ಹೀಗೆ ಅವರ ಬಡ ಕುಟುಂಬ ಸಾಗುತ್ತಿತ್ತು. ಕೆಲವು ದಿನಗಳ ನಂತರ ರಮೇಶನ ದೊಡ್ಡಪ್ಪ ಬಂದನು. ಆತನ ಹೆಸರು ಚಂದ್ರಪ್ಪ. ಅಪ್ಪ ಸಾಯುವಾಗ ಇಬ್ಬರಿಗೂ ಐದು ಐದು ಎಕರೆ ಜಮೀನು ಇತ್ತು. ಊರಿನ ಪಕ್ಕದಲ್ಲಿರುವ ಹೊಲವನ್ನು ಚಂದ್ರಪ್ಪ ತೆಗೆದುಕೊಳ್ಳುತ್ತಾನೆ. ಊರು ಬಿಟ್ಟು ಸ್ವಲ್ಪ ದೂರದಲ್ಲಿ ಹೊಲವನ್ನು ಬಸವರಾಜನಿಗೆ ಎಂದು ಅವರ ಅಪ್ಪ ಹೇಳಿರುತ್ತಾನೆ. ಆಗ ಬಸವರಾಜನು 'ಅಣ್ಣ ನಿನ್ನ ಹೊಲ ನೋಡಲು (ವಿಸ್ತೀರ್ಣದಲ್ಲಿ) ದೊಡ್ಡದಾಗಿ ಕಾಣುತ್ತದೆ, ಆದರೆ ನನ್ನಹೊಲ ಏಕೆ ಸಣ್ಣದಾಗಿ ಕಾಣುತ್ತದೆ' ಎಂದನು. ಆಗ ಚಂದ್ರಪ್ಪ 'ಇದು ಎಲ್ಲೋ ಪಕ್ಕದ ಊರಿನ ಯಜಮಾನ ಏನೋ ಮೋಸ ಮಾಡಿದ್ದಾನೆ ಎನ್ನಿಸುತ್ತದೆ' ಎಂದನು.




ಆಗ ಇಬ್ಬರೂ ಪಕ್ಕದ ಊರಿಗೆ ಹೋದರು. ಯಜಮಾನನನ್ನು ಕಂಡು 'ನಮ್ಮ ಹೊಲವನ್ನು ಮೋಸದಿಂದ ತೆಗೆದುಕೊಂಡಿದ್ದೀಯಾ' ಎಂದರು. ಆಗ ಯಜಮಾನ ನಕಲಿ ಪಹಣಿ ಪತ್ರವನ್ನು ತಂದು ತೋರಿಸುತ್ತಾನೆ. ಆದರೆ ಇವರಿಬ್ಬರಿಗೂ ವಿದ್ಯೆಯಲ್ಲದ ಕಾರಣ ಅದು ನಕಲಿಯೋ ಅಸಲಿಯೋ ಎಂದು ತಿಳಿಯಲಿಲ್ಲ. ಹಾಗಾಗಿ ಆ ನಕಲಿ ಪಹಣಿ ಪತ್ರವನ್ನು ನೋಡಿ ಮನೆಗೆ ಬರುತ್ತಾರೆ. ಆಗ ಬಸವರಾಜನು ಮೂರು ಎಕರೆ ಹೊಲ ಹೋಯಿತು ಎಂದು ಅಳುತ್ತಾ ಕೂತನು. ಆಗ ಬಸವರಾಜನ 'ನಮಗೆ ವಿದ್ಯೆ ಇಲ್ಲದ ಕಾರಣ ಇಂತಹ ಕಷ್ಟಗಳನ್ನು ಅನುಭವಿಸುವಂತಾಯ್ತು. ಆದರೆ ನನ್ನಂತೆ ನನ್ನ ಮಕ್ಕಳು ತೊಂದರೆಗೆ ಒಳಗಾಗಬಾರದು' ಎಂದು ತಮ್ಮ ಇಬ್ಬರೂ ಮಕ್ಕಳನ್ನು ಶಾಲೆಗೆ ಕಳಿಸಿದನು. ಇಬ್ಬರೂ ಮಕ್ಕಳು ಚೆನ್ನಾಗಿ ಓದಿ ನೌಕರಿ ಪಡೆದರು. ಮುಂದೊಂದಿನ ಅನ್ಯಾಯದಿಂದ ಅನ್ಯರ ಪಾಲಾಗಿದ್ದ ತಮ್ಮ ಜಮೀನನ್ನು ಕೋರ್ಟಿನಲ್ಲಿ ದಾವೆ ಹೂಡಿದರು. ದಾಖಲೆಗಳನ್ನು ಪರಿಶೀಲಿಸಿದ ಕೋರ್ಟ್ ಅವರ ಜಮೀನನ್ನು ವಾಪಾಸು ಕೊಡಿಸಿತು. ಆಗ ತಂದೆಗೆ ಖುಷಿಯಾಯಿತು. ಮಕ್ಕಳನ್ನು ಶಾಲೆಗೆ ಕಳಿಸಿದ್ದು ಸಾರ್ಥಕವಾಯಿತು ಎಂದು ಊರಿನವರ ಮುಂದೆ ಹೇಳುತ್ತಾ ಎಲ್ಲರೂ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಿ ಎಂದು ಹೇಳಿದನು. ಅಂದಿನಿಂದ ಅವರ ಕುಟುಂಬ ಸಂತೋಷದಿಂದ ಜೀವನ ನಡೆಸಿದರು.

**– ಕೆ. ಸೃಜನ್. 9ನೇ ತರಗತಿ.**
ಸರ್ಕಾರಿ ಪ್ರೌಢಶಾಲೆ ಬಸರಕೋಡು. ಹ.ಬೊ.ಹಳ್ಳಿ(ತಾ)

# ಅಸಾಧ್ಯವಪ್ಪ ಇಂಥವರ ಜೊತೆಗಿನ ಬದುಕು



ಕೆಲ ಜನರು ಸೃಷ್ಟಿಸುವ ಅವಘಡಗಳಿಗೆ, ತೊಂದರೆಗಳಿಗೆ ಈಡಾಗುವ ಬಹಳಷ್ಟು ಜನರ ಬಾಯಿಂದ ಬರುವ ಒಂದೇ ಒಂದು ಉದ್ಗಾರ ಅಸಾಧ್ಯವಪ್ಪ ಇಂಥವರನ್ನು ಸಂಭಾಳಿಸುವುದು! ಅಂತ, ಅದರಲ್ಲೂ ಆ ವ್ಯಕ್ತಿ ನಿಮ್ಮ ಅತ್ಯಂತ ಆಪ್ತ ವಲಯದಲ್ಲಿ ಇದ್ದರೆ, ಸಂಬಂಧಿಯಾಗಿದ್ದರೆ ಅನಿವಾರ್ಯವಾಗಿ ಯಾದರೂ ಅಂತವರನ್ನು ಸಂಭಾಳಿಸಲೇಬೇಕಾದ ಪರಿಸ್ಥಿತಿ ನಮ್ಮದಾಗಿರುತ್ತದೆ.

ಬದುಕಿನಲ್ಲಿ ಅವರು ಅನುಭವಿಸಿರುವ ತೊಂದರೆಗಳು ಚಿಕ್ಕಂದಿನ ಆಘಾತಗಳು, ಸ್ವಪ್ರತಿಷ್ಠೆ, ಮೇಲರಿಮೆ ಅಥವಾ ಕೀಳರಿಮೆಗಳು ಬದುಕಿನೆಡೆಗೆ ಇರುವ ನಿರಾಶೆಗಳ ಒಟ್ಟು ಮೊತ್ತವೇ ಅವರಾಗಿದ್ದು

ತಾವು ಹಿಡಿದ ಮೊಲಕ್ಕೆ ಮೂರೇ ಕಾಲು ಎಂಬಂತೆ ವರ್ತಿಸಲು ಕಾರಣಗಳು ಹಲವು. ಅವುಗಳನ್ನು ಅವಲೋಕಿಸಿ ಅರಿತುಕೊಂಡಾಗ ಅವರನ್ನು ಸಂಭಾಳಿಸುವುದು ತುಸು ಹಗುರ ಎಂದೆನಿಸಬಹುದು.

* ಅವರ ಆ ರೀತಿಯ ಸ್ವಭಾವಕ್ಕೆ ಕಾರಣಗಳನ್ನು ಅರಿಯಬೇಕು. ಅಸುರಕ್ಷತಾ ಭಾವನೆ, ಬಾಲ್ಯದ ದುರ್ಘಟನೆಗಳು, ಈಡೇರದ ಆಶಯಗಳು, ವಿಪರೀತ ಮೇಲರಿಮೆ ಇಲ್ಲವೇ ಕೀಳರಿಮೆಗಳು ಅವರಲ್ಲಿ ನಿರಾಶೆಯನ್ನು ಹುಟ್ಟಿಸಿದ್ದು ಈ ರೀತಿ ಅವರು ವರ್ತಿಸಲು ಕಾರಣವಾಗಿರುತ್ತದೆ. ಇದನ್ನು ಅರಿತುಕೊಂಡಾಗ ಅವರೊಂದಿಗಿನ ಕಿರಿಕಿರಿಯ ಸಂಬಂಧದ ಬದಲಾಗಿ ಸಹಾನುಭೂತಿಯಿಂದ ವರ್ತಿಸಲು ಸಾಧ್ಯವಾಗುತ್ತದೆ.

* ಸ್ವಯಂ ನಿಯಂತ್ರಣವನ್ನು ಕಳೆದುಕೊಂಡಿರುವ, ಸವಾಲೆಸೆಯುವಂತಹ ವ್ಯಕ್ತಿತ್ವವನ್ನು ಹೊಂದಿರುವವರೊಂದಿಗೆ ವರ್ತಿಸುವಾಗ ಶಾಂತತೆ ಮತ್ತು ಹೊಂದಾಣಿಕೆಯ ಮನೋಭಾವದಿಂದ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಬೇಕಾದ್ದು ಅತ್ಯವಶ್ಯಕ.

* ಅವರೊಂದಿಗಿನ ಸಂವಹನದಲ್ಲಿ ನಿಮ್ಮ ಸಮಯ ಮತ್ತು ಶಕ್ತಿ ತೋರಿಹೋಗದಂತೆ ಸ್ಪಷ್ಟವಾದ ಮಿತಿಗಳನ್ನು ಹಾಕಿಕೊಳ್ಳುವುದು ಒಳಿತು. ಒಪ್ಪಿಕೊಳ್ಳಬಹುದಾದ ಮತ್ತು ಒಪ್ಪಿಕೊಳ್ಳಲಾಗದ ವರ್ತನೆಗಳ ನಡುವಿನ ಅಂತರವನ್ನು ಅರಿತು ನಿಮ್ಮ ಆತ್ಮಗೌರವ ಮತ್ತು ಅಂತಃಸ್ಸತ್ವವನ್ನು ಉಳಿಸಿಕೊಳ್ಳಬೇಕು.

* ಅಂತಹ ವ್ಯಕ್ತಿಗಳೊಂದಿಗಿನ ಮಾತುಕತೆಯಲ್ಲಿ ಅವರ ತೊಂದರೆ ಯ ಕುರಿತು ಗಮನಹರಿಸಬೇಕೆ ವಿನಃ ಆ ವ್ಯಕ್ತಿಯನ್ನು ಕುರಿತಲ್ಲ. ವಿಷಯದ ಕುರಿತಾದ ಚರ್ಚೆ ರಚನಾತ್ಮಕವಾಗಿದ್ದು ಯಾವುದೇ ರೀತಿಯ ವೈಯುಕ್ತಿಕ ದೋಷಾರೋಪಗಳನ್ನು ಹೊರಿಸಲು ಸಾಧ್ಯವಾಗದಂತೆ ಇರಬೇಕು..ಸಮಸ್ಯೆಯನ್ನು ದೀರ್ಘ ಕಾಲ ಎಳೆಯದೆ ಸೂಕ್ತವಾಗಿ ಮತ್ತು ಕ್ಷಿಪ್ರವಾಗಿ ಪರಿಹರಿಸಬೇಕು. ತಮ್ಮದೇ ಅಹಮ್ಮಿನ ಕೋಟೆಯೊಳಗೆ ಬಂಧಿಯಾಗಿರುವ ಅವರು ಬೇರೆಯವರ ಅಭಿಪ್ರಾಯ ಗಳನ್ನು ಅಷ್ಟು ಸುಲಭವಾಗಿ ಒಪ್ಪುವುದಿಲ್ಲ, ಆದರೂ ಪ್ರಯತ್ನ ಮಾಡಿದರೆ ತಪ್ಪಿಲ್ಲ ಎಂಬ ಭಾವದಿಂದ ಪ್ರಯತ್ನಿಸಿ. ನಿಮ್ಮ ಮುಂದೆ ಒಪ್ಪದೇ ಹೋದರು ಅವರ ಅಂತರಾತ್ಮಕ್ಕೆ ತಪ್ಪು ಸರಿಗಳ ಕಿಂಚಿತ್ ಅರಿವಾದರೂ ಉಂಟಾಗಬಹುದು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

* ನಿಮ್ಮ ಅವಶ್ಯಕತೆಗಳನ್ನು ಮತ್ತು ಅಭಿಪ್ರಾಯಗಳನ್ನು ಜೋರು ಮಾತಿಂದ ಹೇಳದೆ ಮೆಲುವಾಗಿ ಆದರೆ ಸ್ಪಷ್ಟ ಮತ್ತು ಗೌರವಯುತ ಸಂಭಾಷಣೆಯ ಮೂಲಕ ವ್ಯಕ್ತಪಡಿಸಬೇಕು. ಇದು ವಿಷಯದೆಡೆಗಿನ ನಿಮ್ಮ ದೃಢ ಮತ್ತು ಅಧಿಕಾರಯುತ ವರ್ತ ನೆಗೆ ಸಾಕ್ಷಿಯಾಗಬೇಕು. ಪ್ರತಿ ಬಾರಿಯೂ ಹೋಗಲಿ ಬಿಡು ಎಂಬ ಉದಾರ ಭಾವವನ್ನು ನಿಮ್ಮ ಬಲಹೀನತೆ ಎಂದು ಅವರು ತಿಳಿದುಕೊಳ್ಳಬಾರದು.. ಅವಶ್ಯ ವೆನಿಸಿದಲ್ಲಿ ತುಸು ಕಠಿಣತೆ ಒಳ್ಳೆಯದು.

* ಎಲ್ಲ ಯುದ್ಧಗಳನ್ನು ಗೆಲ್ಲಲೇಬೇಕೆಂದಿಲ್ಲ, ಮತ್ತೆ ಕೆಲ ಯುದ್ಧಗಳು ಹೋರಾಟಕ್ಕೆ ಯೋಗ್ಯವಲ್ಲ, ಬದಲಾಗಲು ಇಲ್ಲವೇ ಹೊಂದಿಕೊಳ್ಳಲು ಒಬ್ಬ ವ್ಯಕ್ತಿ ಒಪ್ಪದೇ ಹೋದಾಗ ನೀವು ನಿಮ್ಮ ವೈಯುಕ್ತಿಕ ಹಿತಾಸಕ್ತಿ ಯನ್ನು ಗಮನದಲ್ಲಿಟ್ಟುಕೊಂಡು ಹಿಂದೆ ಸರಿಯಬಹುದು. ಇದನ್ನೇ ನಮ್ಮ ಹಿರಿಯರು "ಬೇಕಿದ್ದರೆ ಬೆರೆತು ನಡೆ, ಬೇಡವಾದರೆ ಸರಿದು ನಡೆ" ಎಂದು ಹೇಳಿರುವುದು.

* ಅವರು ಎದುರಿಸುತ್ತಿರುವ ಸವಾಲುಗಳನ್ನು ಸಹಾನುಭೂತಿಯಿಂದ ನೋಡುವುದರಲ್ಲಿ ತಪ್ಪಿಲ್ಲ ಆದರೆ ಅವರ ನಿರಾಶಾವಾದ ನಮ್ಮ ಬದುಕಿನ ಮೇಲೆ ಪರಿಣಾಮವನ್ನು ಬೀರದಂತೆ ಸಮತೋಲನವನ್ನು ಸಾಧಿಸಬೇಕು. ಸ್ವಯಂ ಅರಿವು, ಭಾವನಾತ್ಮಕ ಜಾಣ್ಮೆ ಮತ್ತು ಜಾಣ ನಡೆಗಳ ಮೂಲಕ ಇಂತಹ ವ್ಯಕ್ತಿಗಳನ್ನು ಸಂಭಾಳಿಸುವುದು ನಮ್ಮ ಮಾನಸಿಕ ಆರೋಗ್ಯಕ್ಕೆ ಒಳಿತು.

ಇಂತಹ ವ್ಯಕ್ತಿಗಳು ತಮ್ಮ ಜೀವನದ ಸವಾಲುಗಳನ್ನು ಎದುರಿಸುವಲ್ಲಿ ಸೋತಿದ್ದು 'ಅನಿಷ್ಟಕ್ಕೆಲ್ಲ ಶನೀಶ್ವರನೇ ಕಾರಣ' ಎಂಬಂತೆ ತಮ್ಮ ಬದುಕಿನ ಎಲ್ಲಾ ಆಗುಹೋಗುಗಳಿಗೆ ತಮ್ಮ ಕ್ರಿಯಾಶೀಲತೆಯ ಕೊರತೆಯನ್ನು ಕಾರಣವಾಗಿಸದೆ ಬೇರೆಯವರತ್ತ ಬೆರಳು ತೋರುತ್ತಾರೆ. ತಮ್ಮದೇ ಸರಿ ಎಂಬ ಧೋರಣೆಯಲ್ಲಿ ಬೇರೆಯವರನ್ನು ನೋಯಿಸಿ ನರಳಿಸುತ್ತಾರೆ, ಎಲ್ಲರಲ್ಲೂ, ಎಲ್ಲದರಲ್ಲೂ ಪರಿಪೂರ್ಣತೆ ಯನ್ನು ಆಶಿಸುವ ಅವರು ತಾವು ಮಾತ್ರ ಅಪರಿಪೂರ್ಣರಾಗಿಯೇ ಉಳಿಯುತ್ತಾರೆ.

ಅಕಸ್ಮಾತ್ ಕುಟುಂಬದಲ್ಲಿ ಇಂತಹ ನಿರಾಶಾವಾದವನ್ನು ಹೊಂದಿರುವ, ತಾನೇ ಸರಿ ತನ್ನದೇ ಸರಿ ಎಂಬ ಮನೋಭಾವವನ್ನು ಹೊಂದಿರುವ ವ್ಯಕ್ತಿ ಇದ್ದರೆ, ಮತ್ತು ಅವರು ತಮ್ಮಿಂದ ಬೇರೆಯವರಿಗೆ ಸಮಸ್ಯೆಯಾಗುತ್ತದೆ ಎಂಬುದನ್ನು ಅರಿತುಕೊಳ್ಳದೆ ಹೋದಾಗ (ಬಹುತೇಕ ಸಂದರ್ಭದಲ್ಲಿ ಅರಿತುಕೊಳ್ಳುವುದಿಲ್ಲ ಕೂಡ), ಆ ಕುಟುಂಬ ಅವರಿಂದ ಬಹಳಷ್ಟು ಮಾನಸಿಕ ತೊಂದರೆಗಳನ್ನು ಅನುಭವಿಸು ವುದಲ್ಲದೆ ಸಾಮಾಜಿಕವಾಗಿಯು ಘನತೆಯ ಬದುಕನ್ನು ಬದುಕಲು ಸಾಧ್ಯವಾಗದ ಪರಿಸ್ಥಿತಿ ಒದಗುತ್ತದೆ. ಇಲ್ಲದ ಪ್ರತಿಷ್ಟೆಗಳು, ವೈಯುಕ್ತಿಕ ಹಿತಾಸಕ್ತಿ, ವಿವೇಚನಾ ರಹಿತ ನಡೆಗಳ ಮೂಲಕ ಅಪಹಾಸ್ಯಕ್ಕೆ ಒಳಗಾಗುವ ಇಂತಹವರು ತಾವು ಎಲ್ಲಿ ತಪ್ಪುತ್ತಿದ್ದೇವೆ ಎಂಬುದನ್ನು ಪರಾಮರ್ಶೆಗೆ ಒಳಪಡಿಸದೆ ಹೋಗುತ್ತಾರೆ. ತಮ್ಮನ್ನು ತಾವು ತಿದ್ದಿಕೊಳ್ಳಲು ಯೋಚಿಸದೆ ಹೋದಾಗ ಅವರ ಜೊತೆಗಿರುವ ಜನ ದೂರ ಸರಿಯುವುದನ್ನು ಕಂಡು ಅವರ ಮೇಲೆ ಇಲ್ಲದ ಅಪವಾದಗಳನ್ನು ಹೊರಿಸುವ ಮೂಲಕ ತೃಪ್ತಿಯನ್ನು ಕಂಡು ಕೊಳ್ಳಲು ಬಯಸುತ್ತಾರೆ. ಇಂಥವರಿಗೆ ಹೊಂದಾಣಿಕೆ, ಪ್ರೀತಿ, ವಿಶ್ವಾಸ, ಇದ್ದುದರಲ್ಲಿಯೇ ತೃಪ್ತಿಯನ್ನು ಕಂಡುಕೊಳ್ಳುವ ವಿಶಾಲ ಮನೋಭಾವ ಮತ್ತು ಸೂಕ್ತ ಮಾನಸಿಕ ಚಿಕಿತ್ಸೆಯ ಅವಶ್ಯಕತೆ ಇದ್ದು ಈ ನಿಟ್ಟಿನಲ್ಲಿ ಅವರ ಕುಟುಂಬದವರು ಕಾರ್ಯ ನಿರ್ವಹಿಸಬೇಕು.

# ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.


## ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

# ರಾಂಗ್ ನಂಬರ್ ನಿಂದ ಆದ ಅನುಭವ-ಅವಾಂತರ

ನಮ್ಮ ಪರಿಚಯಸ್ತರು ಒಬ್ಬರು ಮನೆಯಲ್ಲಿ ಕುಳಿತು ಕಚೇರಿಯ ಕೆಲಸವನ್ನು ನಿರ್ವಹಿಸುತ್ತಿದ್ದರು. ಅವರ ಮೊಬೈಲ್ ಗೆ ಹೊಸ ನಂಬರ್ ನಿಂದ ಕರೆ ಬಂದಿತ್ತು. ಯಾವುದೋ ಗೊತ್ತಿಲ್ಲದ ರಾಂಗ್ ನಂಬರ್ ಎಂದು ಕೆಲಸದ ಒತ್ತಡದಲ್ಲಿ ಕರೆಯನ್ನು ಸ್ವೀಕರಿಸುವ ಗೋಜಿಗೆ ಅವರು ಹೋಗಲಿಲ್ಲ. ಪದೇ ಪದೇ ಅದೇ ನಂಬರಿನಿಂದ ಕರೆ ಬರುತ್ತಿದ್ದರಿಂದ ಆ ಕರೆಯನ್ನು ಸ್ವೀಕರಿಸಿದರು. ಆಗ ಅವರಿಗೆ ದೊಡ್ಡದೊಂದು ಆಘಾತ ಕಾದಿತ್ತು.



ನಾವು ಮುಂಬೈ ಕ್ರೈಮ್ ಡಿಪಾರ್ಟ್ಮೆಂಟ್ನಿಂದ ಕರೆ ಮಾಡುತ್ತಿರುವುದು ನಮ್ಮ ಡಿಪಾರ್ಟ್ಮೆಂಟ್ ಇಂದ ನಿಮ್ಮನ್ನು ವಿಚಾರಣೆ ನಡೆಸಲು ಆದೇಶ ಬಂದಿದೆ. ನಿಮ್ಮನ್ನು ವಿಚಾರಿಸಬೇಕು ವಿಡಿಯೋ ಕರೆ ಮಾಡುತ್ತೇವೆ ಕೋಣೆಯಲ್ಲಿ ನೀವು ಮಾತ್ರ ಇರಬೇಕು ಯಾರು ತೊಂದರೆ ಮಾಡಬಾರದು. ಮನೆಯವರನ್ನು ಹೊರಗೆ ಕಳುಹಿಸಿ ಕೋಣೆಯನ್ನು ಲಾಕ್ ಮಾಡಿಕೊಳ್ಳಿ ಎಂದು ಆ ವ್ಯಕ್ತಿಯು ಹೇಳಿದ.

ವಿಷಯವನ್ನು ಕೇಳಿದೊಡನೆ ಇವರು ಹೆದರಿ ಹೋದರು. ಅವರ ಆದೇಶದಂತೆ ಹೆಂಡತಿ ಮಕ್ಕಳನ್ನು ಕೊಠಡಿ ಇಂದ ಹೊರಗೆ ಕಳುಹಿಸಿದರು.

ತುಂಬಾ ಆತಂಕದಲ್ಲಿದ್ದ ಗಂಡನನ್ನು ನೋಡಿ ಏನೋ ಕೆಲಸದ ಒತ್ತಡವಿರಬೇಕು ಎಂದುಕೊಂಡು ಅವರ ಹೆಂಡತಿ ಸುಮ್ಮನಾದರು.

ನಂತರ ಇವರಿಗೆ ವಿಡಿಯೋ ಕರೆ ಬಂದಿತು. ಆ ಕರೆಯಲ್ಲಿಯೇ ಇವರನ್ನು ಸಮ್ಮೋಹನಕ್ಕೆ ಒಳಪಡಿಸಿ ಇವರ ಅಕೌಂಟ್ ನಿಂದ 13 ಲಕ್ಷ ವರ್ಗಾವಣೆ ಮಾಡಿಸಿಕೊಂಡರು. ಆ ಸಮಯದಲ್ಲಿ ಈ ವ್ಯಕ್ತಿ ಅವರಾಗಿಯೇ ಇರಲಿಲ್ಲ. ಅವರ ಆದೇಶಗಳನ್ನು ಮಂತ್ರಮುಗ್ಧರಾದಂತೆ ಚಾಚೂ ತಪ್ಪದೇ ಪಾಲಿಸಿದರು. ಎರಡು ಗಂಟೆಯಾದರೂ ಇವರು ರೂಮಿನಿಂದ ಹೊರಬರದದ್ದನ್ನು ಗಮನಿಸಿದ ಅವರ ಪತ್ನಿ ಬಾಗಿಲು ಬಡಿಯಲು ಶುರು ಮಾಡಿದರು. ಅಷ್ಟು ಹೊತ್ತಿಗಾಗಲೇ 5 ಲಕ್ಷ ವರ್ಗಾವಣೆಯಾಗಿತ್ತು. ಸ್ವಲ್ಪ ಸಮಯದ ನಂತರ ಹಣ ವರ್ಗಾವಣೆಯಾದ ವಿವರಗಳು ಇವರ ಮೊಬೈಲಿಗೆ ತಲುಪಿತು. ಇವರಿಗೆ ಮೈ ತಿಳಿದು ಬಾಗಿಲನ್ನು ತೆರೆದು ಪತ್ನಿಗೆ ವಿಷಯವನ್ನು ತಿಳಿಸಿ ನಾನು ಮೋಸ ಹೋಗಿದ್ದೇನೆ ಎಂದು ನಿಧಾನವಾಗಿ ಅರಿವು ಮಾಡಿಕೊಂಡರು. ತಕ್ಷಣ ಬ್ಯಾಂಕಿಗೆ ಕರೆ ಮಾಡಿ ಉಳಿದ ಹಣವನ್ನು ವರ್ಗಾವಣೆ ಮಾಡದಂತೆ ಸೂಚಿಸಿದರು. ತದನಂತರ ಸೈಬರ್ ಕ್ರೈಂ ಗೆ ದೂರು ದಾಖಲಿಸಿ ಎಲ್ಲಾ ವಿವರಗಳನ್ನು ತಲುಪಿಸಿದರು.

ಸೈಬರ್ ಪೊಲೀಸರ ಬಳಿಯಲ್ಲಿ ಇದೇ ತೆರನಾಗಿ ಮೋಸ ಹೋದ ಹಲವಾರು ಕೇಸುಗಳು ಬಂದಿತ್ತು. ದೇಶದ ಹಲವಾರು ಭಾಗಗಳಲ್ಲಿ ಈ ರೀತಿಯ ಮೋಸ ಮಾಡುವ ಆನ್ಲೈನ್ ಇಂದ ಹಣವನ್ನು ಲಪಟಾಯಿಸುವ ಕಳ್ಳರ ಒಂದು ಜಾಲವೇ ಇರುವುದಾಗಿ ಆ ವ್ಯಕ್ತಿಗೆ ಅವರು ಹೇಳಿದರು. ಇಂದಿಗೂ ಆ ಜಾಲವು ಪೊಲೀಸರ ಕೈಗೆ ಸಿಕ್ಕಿಲ್ಲ. ಹಲವು ಜನರ ದುಡ್ಡು ಮಂಗಮಾಯವಾಗಿದ್ದು ಇನ್ನೂ ದೊರಕದಾಗಿದೆ. ಸೈಬರ್ ಕ್ರೈಂ ನ ವ್ಯಾಪ್ತಿ ಬಹಳ ಆಳವಾಗಿ ಬೇರು ಬಿಟ್ಟಿವೆ. ನಾವೆಲ್ಲರೂ ಎಚ್ಚರವಾಗಿ ಆಮಿಷಗಳಿಗೆ ಬಲಿ ಬೀಳದೆ ವ್ಯವಹರಿಸಬೇಕಾಗಿದೆ. ಸೈಬರ್ ಕ್ರೈಂ ನ ಅರಿವನ್ನು ಹೊಂದಬೇಕಾಗಿದೆ ಹಾಗೂ ಸಮಾಜದಲ್ಲಿ ಅದರ ಬಗ್ಗೆ ಅರಿವನ್ನು ಮೂಡಿಸಬೇಕಾಗಿದೆ.

**~ ಚೇತನ ಭಾರ್ಗವ, ಬೆಂಗಳೂರು**

# "ಈ ಕ್ಷಣದಲ್ಲಿ ಬದುಕಿ" ಏಕೆಂದರೆ ಇದಷ್ಟೇ ನಿಮ್ಮದು

ಮೊನ್ನೆ ನಮ್ಮನೆ ಪಕ್ಕದಲ್ಲಿ 90 ವರ್ಷದ ಅಜ್ಜ ಒಬ್ಬರು ತೀರಿಕೊಂಡರು. ನಾವೆಲ್ಲರೂ ಅವರಿಗೆ ಪ್ರೀತಿಯಿಂದ "ಸಾಹುಕಾರ್ ಮುತ್ಯಾ" ಅಂತ ಕರಿತಿದ್ವಿ. ಆ ತಾತ ಎಷ್ಟು ಶ್ರೀಮಂತರಿದ್ದರು ಎಂದರೆ ಎರಡು ತಲೆಮಾರಿಗಾಗುವಷ್ಟು ಆಸ್ತಿ ಮಾಡಿಟ್ಟಿದ್ದರು.

ಹಾಗೆಯೇ ಆಸ್ತಿಯ ಎರಡು ಪಟ್ಟು ಜುಗ್ಗನಿದ್ದನು (ಕಂಜೂಸ್). ಒಂದೊಂದು ರೂಪಾಯಿ ಕೂಡ ಲೆಕ್ಕ ಇಡುತ್ತಿದ್ದನು, ಯಾರಲ್ಲಿಯೂ ಸಹಾಯ ಬೇಡಿದವನಲ್ಲ ಹಾಗೆಯೇ ಮಾಡಲಿಲ್ಲ ಕೂಡ. ದುಡ್ಡು, ಆಸ್ತಿ ಸಂಪಾದಿಸುವುದರಲ್ಲೇ ಅವನ ಮುಕ್ಕಾಲು ಭಾಗ ಆಯಸ್ಸು ಕಳೆದುಕೊಂಡಿದ್ದನು.

ಆ ತಾತನಿಗೆ ಇಬ್ಬರು ಮಕ್ಕಳು ಒಂದು ಗಂಡು ಇನ್ನೊಂದು ಹೆಣ್ಣು. ಇಬ್ಬರಿಗೂ ಮದುವೆ ಮಾಡಿದನು. ಮಗಳು ಗಂಡನ ಮನೆಗೆ ಹೋದಳು. ಮಗನ ಹೆಂಡತಿ ಸರ್ಕಾರಿ ನೌಕರಿ ಎಂದು ತವರೂರಲ್ಲೇ ಉಳಿದಳು. ಮಗನಿಗೂ ಬೇರೆ ಆಯ್ಕೆಯಿಲ್ಲದೆ ಅವಳೂರಿಗೆ ಹೋಗಿಬಂದು ಮಾಡುತ್ತಿದ್ದ.

ಕಾಲ ಉರುಳಿತು, ತಾತನ ಮಗನಿಗೂ ಮಕ್ಕಳಾದವು. ಆದರೂ ಸೊಸೆ ಮಾತ್ರ ಈ ಊರಿಗೆ ಬರಲು ಮನಸ್ಸು ಮಾಡಲಿಲ್ಲ. 'ಅಲ್ಲಿಯೇ ಆ ಊರಿಗೆ ಹೋಗಿ ಇರೋಣ' ಎಂದು ಮಗ ಬಿಟ್ಟಿ ಸಲಹೆಯನ್ನೂ ನೀಡಿದ. ಆದರೆ ತಾತನಿಗೆ ತಾನು ಕಟ್ಟಿದ ಮನೆ, ಇಲ್ಲಿಯ ಆಸ್ತಿ, ಈ ಊರು ಬಿಟ್ಟು ಬೇರೆಡೆಗೆ ಹೋಗಲು ಸುತಾರಾಂ ಇಷ್ಟವಿರಲಿಲ್ಲ. ಅದಾಗಲೇ ಹೆಂಡತಿಯನ್ನು ಕಳೆದುಕೊಂಡು ಒಂಟಿಯಾಗಿದ್ದ ತಾತನಿಗೆ ಈಗ ಮಕ್ಕಳು ಮೊಮ್ಮಕ್ಕಳು ಇದ್ದು ಯಾರು ಇಲ್ಲದಂತೆ ಆದನು. ಮಗಳೂ ಕೂಡ ಸೂರ್ಯ ಹುಟ್ಟುವ ಮುಂಚೆ ಬಂದು ಮುಳುಗುವುದರೊಳಗೆ ಊರು ಸೇರಿಕೊಳ್ಳುತ್ತಿದ್ದಳು. ಮೊಮ್ಮಕ್ಕಳಿಗೋ ಅಜ್ಜಿ ತಾತ ಎನ್ನುವ ಭಾವನೆಗಳೇ ಇಲ್ಲದಂತೆ ಬೆಳೆಸಿದ್ದರು.



ಕೂತು ಉಂಡರು ಕರಗದಷ್ಟು ಆಸ್ತಿಯಿದ್ದರೂ, ಅನುಭವಿಸಲು ಜೊತೆಗೆ ಯಾರೂ ಇರಲಿಲ್ಲ. ಆಯಸ್ಸು, ಆರೋಗ್ಯ ಎರಡೂ ಕ್ಷೀಣಿಸಿತು. ಅರಮನೆಯಂತಹ, ಭೂತ ಬಂಗಲೆಯಲ್ಲಿ ಕೇವಲ ದುಡ್ಡಿಗಾಗಿ ದುಡಿಯುತ್ತಿರುವ ಆಳುಗಳೊಂದಿಗೆ ಉಳಿದಿರುವ ತನ್ನ ಪಶ್ಚಾತ್ತಾಪದ ದಿನಗಳನ್ನು ಕಳೆದು ತಾತ ಕಣ್ಣುಮುಚ್ಚಿದ.

ಅದಕ್ಕೇ ನಿರ್ಜೀವ ವಸ್ತುಗಳಿಗಿಂತ ಜೀವವಿರುವ ಸಂಬಂಧಗಳಿಗೆ ಬೆಲೆ ಕೊಡಬೇಕು, ಆಸ್ತಿಗಿಂತ ಸಂಬಂಧಗಳನ್ನು ಗಳಿಸಬೇಕು, ಶ್ರೀಮಂತಿಕೆಯ ಬದುಕಿಗಿಂತನೆಮ್ಮದಿಯ ಬದುಕು ನಮ್ಮದಾಗಬೇಕು, ನಮ್ಮ ಜೀವನದ ಪ್ರತಿಕ್ಷಣ ಜೀವಿಸುವುದಕ್ಕಾಗಿದೆಯೇ ಹೊರತು ಕೇವಲ ದುಡ್ಡನ್ನೇ ಗುಡ್ಡೆ ಹಾಕುವುದಕ್ಕಲ್ಲ, ಇನ್ನೊಬ್ಬರನ್ನು ಮೆಚ್ಚಿಸಲಿಕ್ಕಲ್ಲ , ತೋರಿಕೆಗಾಗಿ ಅಲ್ಲ. ಜೀವನ ಇರುವುದು ನಿಮಗಾಗಿ, ನೀವು ಪ್ರೀತಿಸುವವರಿಗಾಗಿ ಹಾಗೂ ನಿಮ್ಮನ್ನು ಪ್ರೀತಿಸುವವರಿಗಾಗಿ. ಇಂದೇ ಹೊಸ ಜೀವನವನ್ನು ಶುರು ಮಾಡಿ.

**– ಇಮು, ಹುಬ್ಬಳ್ಳಿ**

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**
**– ಜಾಹೀರಾತು ವ್ಯವಸ್ಥಾಪಕರು.**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055





## ಕವಿ ಮನಸು

### ಕಾಯುವ ಗೋವಿಂದ



ಉಡುಪಿಗೆ ಬಂದೆನು ಕೃಷ್ಣನ ದರ್ಶನ
ಪಡೆಯುವ ಆಸೆಯ ಮನದಿಂದ
ಹಡೆದಿಹ ಮಾತೆಯ ಮಮತೆಯ ತರದಲಿ
ಬಿಡದೆಲೆ ಕಾಯುವ ಗೋವಿಂದ

ಇಳೆಯಲಿ ಗಾಳಿಯನಿರಿಸಿದ ಜೊತೆಯಲಿ
ಬೆಳೆಸಿದ ಹಸಿರನು ಕೊಳೆ ನೀಗೆ
ಮಳೆಯನು ಸುರಿಸುತ ದಾಹವ ನೀಗಿದ
ಬೆಳೆಗಳ ಬೆಳೆಯಲು ಅನುವಾಗೆ

ಆಸ್ತಿಕ ಮಂದಿಯ ಕೆಣಕುತಲಿರುವರು
ನಾಸ್ತಿಕ ಮಂದಿಯು ಅನುದಿನವು
ಜಾಸ್ತಿಯಿದಾಯಿತು ದುಷ್ಟರ ಹಾವಳಿ
ಶಾಸ್ತಿಯ ಮಾಡುವ ಶ್ರೀ ಹರಿಯು

ಧರ್ಮವನುಳಿಸಲು ಬಂದೇ ಬರುವನು
ಕರ್ಮವ ಮರೆತಿಹ ಲೋಕದಲಿ
ಧರ್ಮದ ಹೆಸರಲಿ ನೆತ್ತರು ಹರಿಸದೆ
ಮರ್ಮವನರಿಯುವ ಬಾಳಿನಲಿ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್


ಹಂಪಿ ಟೈಮ್ಸ್
ಪತ್ರಿಕೆಗಾಗಿ ಸಂಪರ್ಕಿಸಿ
ಶಾರದ ಬುಕ್‌ಸ್ಟಾಲ್
ಹೊಸಪೇಟೆ
ಮೊ: 9902909399


## ನಿತ್ಯ ಪಂಚಾಂಗ

ಮಾಸ: ಮಾರ್ಗಶೀರ । ಸಂವತ್ಸರ: ಕ್ರೋಧಿ

**12–12–2024 – ಗುರುವಾರ**

| | |
|---|---|
| ತಿಥಿ | : ದ್ವಾದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಅಶ್ವಿನಿ |
| ಯೋಗ | : ಪರಿಘ |
| ಕರಣ | : ಭವ |
| ಸೂರ್ಯೋದಯ | : 07:00:04 |
| ಸೂರ್ಯಾಸ್ತ | : 17:41:37 |
| ರಾಹು ಕಾಲ | : 13:41–15:01 |
| ಯಮಘಂಡ ಕಾಲ | : 07:00–08:20 |
| ಗುಳಿಕ ಕಾಲ | : 09:40–11:01 |



## ತುಂಗಭದ್ರಾ ನೀರಿನ ಮಟ್ಟ

ಬುಧವಾರ : 11–12–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1629.40 ಅಡಿ |
| ಒಳ ಹರಿವು | 5182 ಕ್ಯುಸೆಕ್ |
| ಹೊರ ಹರಿವು | 5387 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 91.830 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1591.32 ಅಡಿ |
| ಒಳ ಹರಿವು | 701 ಕ್ಯುಸೆಕ್ |
| ಹೊರ ಹರಿವು | 2480 ಕ್ಯುಸೆಕ್ |
| ಸಾಮರ್ಥ್ಯ | 12.171 ಟಿಎಂಸಿ |

# ಆತ್ಮಹತ್ಯೆಯೇ ಅಂತಿಮ ಪರಿಹಾರವೇ?



ಆತ್ಮಹತ್ಯೆ ಎಂಬುದು ತಾನು ಸತ್ತು ತನ್ನವರನ್ನು ಜೀವನವಿಡಿ ನೋವಿನಲ್ಲಿ ಸಾಯುವಂತೆ ಮಾಡುವ ಒಂದು ಕೃತ್ಯ, ಅಲ್ಲ ಅಲ್ಲ ಅದೊಂದು ಮಹಾ ಪಾಪ! ಹೌದು ಭೂ ಜಗತ್ತಿನಲ್ಲಿ ಜಾಣ ಜೀವಿ ಎಂದು ಬೀಗುವ ಮನುಷ್ಯನು ಎದುರಾಗುವ ನೋವಿಗೆ, ಬಂದಪ್ಪಳಿಸುವ ಸವಾಲುಗಳಿಗೆ ಎದುರು ಬಿದ್ದು ಎದುರಿಸುವ ಬದಲು ಬೆದರಿ ನೋವು ಮತ್ತು ಸವಾಲುಗಳಿಗೆ ಬೆನ್ನು ತೋರಿಸಿ ನೇಣು ಕುಣಿಕೆಗೆ ಕತ್ತು ಕೊಟ್ಟು ತನ್ನ ಜೀವಕೆ ತಾನೇ ಕೊಳ್ಳಿ ಇಟ್ಟುಕೊಳ್ಳುವುದು ಪಾಪವಲ್ಲದೆ ಮತ್ತೇನು? ದಿನ ಬೆಳಗಾಗುವ ಹೊತ್ತಿಗೆ ಸುದ್ದಿ ಹೊತ್ತು ತರುವ ದಿನಪತ್ರಿಕೆಗಳಲ್ಲಿ ಒಂದಿಲ್ಲದೊಂದು ಕಾರಣಕ್ಕೆ ಆತ್ಮಹತ್ಯೆಯಿಂದ ಸಾವಿಗೀ ಡಾದವರ ವರದಿ ಸಾಮಾನ್ಯವಾಗಿ ಬಿಟ್ಟಿದೆ. ದಿನ ಸಾಯುವವರಿಗೆ ಅಳುವವರು ಯಾರು ಎಂಬ ಮಾತು ಸರಿ ಹೋಗಬಹುದೋ ಏನೋ?

ಅಪಘಾತವೋ ಅವಘಡವೋ ಸಂಭವಿಸಿ ಆದ ದುರಂತಕ್ಕೆ ಪ್ರಾಣ ಪ್ರಾಣತೆತ್ತ ವರನ್ನು ನೋಡಿ ಅಯ್ಯೋ ಅನ್ನಿಸಬಹುದು. ಆದರೆ ತಾನೇ ಸಾವನ್ನು ಮೈ ಮೇಲೆ ಎಳೆದುಕೊಂಡು ಆತ್ಮ ಹತ್ಯಯಿಂದ ಪ್ರಾಣ ಚೆಲ್ಲುವ ದುರಂತಗಳಿಗೆ ಏನನ್ನುವುದು? ಅಂದಹಾಗೆ ಭಾರತವು ಈ ವಿಷಯದಲ್ಲಿ ಜಗತ್ತಿನ ಅತಿ ಹೆಚ್ಚು ಆತ್ಮಹತ್ಯೆಗಳ ಘಟಿಸುವ ರಾಜ್ಯಧಾನಿಯಾಗಿದೆ. ಈ ರೀತಿಯ ಕುಖ್ಯಾತಿಯ ಸಾಧನೆಗೆ ಕರ್ನಾಟಕದ ಕೊಡುಗೆಯು ಕಡಿಮೆ ಏನಿಲ್ಲ ನಾವುಗಳು ಈ ವಿಷಯದಲ್ಲಿ ಎರಡನೇ ಸ್ಥಾನದಲ್ಲಿದ್ದೇವೆ.

ಇತ್ತೀಚಿಗೆ ನಮ್ಮ ನಿಮ್ಮಗಳ ನಡುವೆ ಘಟಿಸಿದ ಕೆಲವೊಂದು ಆತ್ಮಹತ್ಯೆಗಳ ಅವಲೋಕನವನ್ನು ಮಾಡಿಕೊಳ್ಳೋಣ ಗುರು ಪ್ರಸಾದ್ ಕನ್ನಡ ಚಿತ್ರರಂಗದ ದೊಡ್ಡ ನಿರ್ದೇಶಕರು ಉತ್ತಮ ಸಾಹಿತ್ಯ, ಚಿತ್ರಕಥೆ ಬರಹಗಾರರು ಹಾಗೂ ನಿರ್ದೇಶನಕ್ಕೂ ಕೈ ಹಾಕಿ ಸೆನ್ಸೇಷನಲ್ ಚಿತ್ರಗಳನ್ನು ಕನ್ನಡ ಚಿತ್ರ ರಂಗಕ್ಕೆ ನೀಡಿದ್ದರು ಅವರ ಆತ್ಮಹತ್ಯೆ ಸುದ್ದಿ ಟಿವಿಗಳಲ್ಲಿ ಪ್ರಸಾರವಾಗುತ್ತಲೇ ಇಡೀ ಕರ್ನಾಟಕದ ಜನತೆಗೆ ಅಚ್ಚರಿ ಕಾದಿತ್ತು ಆಮೇಲೆ ಗೊತ್ತಾಗಿದ್ದು ಅವರ ಹವ್ಯಾಸಗಳು ಹಾಗೂ ಅಳತೆ ಮೀರಿದ ಸಾಲದ ಸುಳಿ ಅವರನ್ನ ಆತ್ಮಹತ್ಯೆಗೆ ದೂಡಿತ್ತು.

ಕಾಪರ್ ಏಜ್ ಗ್ರೂಪ್ ಆಫ್ ಇನ್ಸ್ಟಿಟ್ಯೂಟ್ ಮಾಲೀಕರು ಆದ ಶರತ್ ನಮ್ಮ ಆತ್ಮೀಯರು ಹೌದು ಕೇವಲ 35 ವರ್ಷಕ್ಕೆ ಸ್ಪರ್ಧಾತ್ಮಕ ಪರೀಕ್ಷೆಗಳ ಆಳ ಅಗಲವನ್ನು ತಿಳಿದು ಅಪಾರ ಪಾಂಡಿತ್ಯವನ್ನು ಗಳಿಸಿ ವಯಸ್ಸಿಗೂ ಮೀರಿದ ಅನುಭವವನ್ನು ಹೊಂದಿ ತಾನು ಐಎಎಸ್ ಕೆಎಎಸ್ ಪಾಸ್ ಆಗದಿದ್ದರೂ ನಾಡಿನ ಹಲವಾರು ವಿದ್ಯಾರ್ಥಿಗಳ ಕೆಎಎಸ್ ಐಎಎಸ್ ಕನಸುಗಳಿಗೆ ರೆಕ್ಕೆಗಳಾಗಿ ದ್ದರು ಸೋತವರನ್ನ ಸಂತೈಸಿ ಗೆಲ್ಲುವ ದಾರಿಯತ್ತ ಕೈ ಹಿಡಿದು ನಡೆಸುತ್ತಿದ್ದರು ಸ್ಪರ್ಧಾ ಜಗತ್ತಿನಲ್ಲಿ ಸೋತೆ ಎಂದ ತಕ್ಷಣ ನೀವು ಜೀವನದಲ್ಲಿ ಸೋತಿಲ್ಲ ಎಂದು ಹೇಳುತ್ತಿದ್ದ ಅವರು ನೇಣು ಕುಣಿಕೆಗೆ ಕೊರಳೊಡ್ಡಿ ಬದುಕಿನ ಯಾತ್ರೆ ಮುಗಿಸಿದ್ದು ದುರಂತವೇ ಸರಿ. ಆ ಸಾವಿಗೆ ಕಾರಣವೇನೆರಬಹುದು?

ಕಳೆದೆರಡು ತಿಂಗಳ ಹಿಂದೆ ನಮ್ಮ ಪಕ್ಕದ ಊರಿನ ಪದವಿ ಓದುತ್ತಿದ್ದ ಹುಡುಗನೊಬ್ಬ ಸ್ನೇಹಿತರ ಸಹವಾಸಕ್ಕೆ ಬಿದ್ದು ಎಣ್ಣೆಯ ನಶೆ ಏರಿಸಿಕೊಂಡಿದ್ದ ಒಮ್ಮೆ ಸ್ನೇಹಿತರ ಪಾರ್ಟಿ ಮುಗಿಸಿಕೊಂಡ ಬಂದ ಮಗನಿಗೆ ತಂದೆ ತಾಯಿಗಳು ಬೈದು ಬುದ್ಧಿ ಮಾತು ಹೇಳಿದಾಗ ಅಮಲೇರಿಸಿಕೊಂಡಿದ್ದ ಅವನು ಕೋಪ ಗೊಂಡು ಹೊಲದಲ್ಲಿ ಇಟ್ಟಿದ್ದ ಕ್ರಿಮಿನಾಶಕವನ್ನ ಸೇವಿಸಿ ನೋವು ಹೆಚ್ಚಾದಾಗ ಮನೆಗೆ ಬಂದು ತಂದೆ ತಾಯಿಗಳಿಗೆ ನಾನು ವಿಷವನ್ನು ಕುಡಿದಿದ್ದೇನೆ ಎಂದು ಹೇಳಿದಾಗ ತಂದೆ ತಾಯಿಗಳು ಅವನ ಮಾತಿಗೆ ಕಿವಿ ಕೊಡಲಿಲ್ಲ ಅದಕ್ಕೂ ಕಾರಣವಿದೆ ಏನೆಂದರೆ ಅವನು ಇಲ್ಲಿಯವರೆಗೆ ತಂದೆ ತಾಯಿಗಳಿಗೆ ವಿಷ ಕುಡಿದು ಸಾಯುತ್ತೇನೆ. ಸಾಯುತ್ತೇನೆ ಎಂದು ಹೆದರಿಸುತ್ತಿದ್ದನು ಹಾಗಾಗಿ ತಂದೆ ತಾಯಿಯವರು ಅವನಿಗೆ ಕಿವಿಗೊಡದೆ ಮರ್ಯಾದೆಯ ಪ್ರಶ್ನೆಗಾಗಿ ಮಗನನ್ನು ರೂಮಿನಲ್ಲಿ ಕೂಡಿ ಹಾಕಿದರು. ವಿಷ ಸೇವಿಸಿದ ಯುವಕನಿಗೆ ಹೊಟ್ಟೆಯೊಳಗಿನ ಉರಿ ತಾಳಲಾರದೆ ತನ್ನ ಸ್ನೇಹಿತನಿಗೆ ಫೋನ್ ಮಾಡಿದಾಗ ಅವನು ನಿಜವಾಗಿಯೂ ವಿಷ ಸೇವಿಸಿದ್ದು ತಿಳಿಯಿತು! ಅಷ್ಟೊತ್ತಿಗಾಗಲೇ ಕಾಲ ಮಿಂಚಿಹೋಗಿತ್ತು ಹಳ್ಳಿಯಿಂದ ದೂರದ ಹಾಸ್ಪಿಟಲ್‌ಗೆ ಕರೆದುಕೊಂಡು ಹೋದರು ಅವನು ಬದುಕುಳಿಯಲಿಲ್ಲ.




ಶಿವಣ್ಣ ಶಿಕ್ಷಕರು
ಗಾಣಗಟ್ಟೆ ಕೂಡ್ಲಿಗಿ


Scan For Digital Colourful
HAMPI TIMES E-paper

ಇತ್ತೀಚಿಗೆ ನಾನು ಕೆಲಸ ಮಾಡುತ್ತಿದ್ದ ಊರಿನಲ್ಲಿ ನಡೆದ ಒಂದು ಘಟನೆ. "ಆಡುವ ಮಗುವಿಗೊಂದು ಕಾಡುವ ಕೂಸು" ಎನ್ನುವ ಹಾಗೆ ಬಾಲ್ಯ ವಿವಾಹವಾಗಿದ್ದ ಹುಡುಗಿಗೆ 18 ತುಂಬುವ ಮೊದಲು ಮೂರು ಹೆಣ್ಣು ಮಕ್ಕಳು! ಕೌಟುಂಬಿಕ ಮತ್ತು ಸಾಮಾಜಿಕ ಒತ್ತಡದ ಪರಿಣಾಮವಾಗಿ ಅವಳು ಸಂಸಾರದ ನೋಗವನ್ನು ಎಳೆಯಲಾರದೆ ಒಂದು ವರ್ಷದ ಹಾಲು ಕುಡಿಯುವ ಅಸುಳೆಯನ್ನು ಬಿಟ್ಟು ನೇಣಿಗೆ ಶರಣಾಗಿದ್ದಳು.

ಕಳೆದ ನಾಲ್ಕು ಐದು ತಿಂಗಳ ಹಿಂದೆ ಚಾರ್ಟೆಡ್ ಅಕೌಂಟೆಂಟ್ ಆಗುವ ಕನಸ ನಿಟ್ಟುಕೊಂಡು ಅದರಲ್ಲಿ ಯಶಸ್ಸನ್ನು ಕಂಡು ಪ್ರತಿಷ್ಠಿತ ಕಂಪನಿಗೆ ಕೆಲಸಕ್ಕೆ ಸೇರಿ ಒಂದು ತಿಂಗಳಲ್ಲಿಯೇ ಅಲ್ಲಿನ ಕೆಲಸದ ಒತ್ತಡವನ್ನು ನಿಭಾಯಿಸಲಾರದೆ ಆತ್ಮಹತ್ಯೆ ಮಾಡಿಕೊಂಡಿದ್ದು ನಮಗೆ ನೆನಪಿದೆ. ಕಳೆದ ನಾಲ್ಕೈದು ದಿನಗಳ ಹಿಂದೆ ಯುವತಿ ಪಿಎಸ್‌ಐ ಪರೀಕ್ಷೆಯ ಕಳೆದೆರಡು ಪ್ರಯತ್ನಗಳಲ್ಲಿ ನಿರೀಕ್ಷಿತ ಫಲಿತಾಂಶ ಬಾರದೆ ಜೀವ ಕಳೆದುಕೊಂಡಳು.

ಪ್ರೀತಿ ಪ್ರೇಮದ ವೈಫಲ್ಯದಿಂದ ಆತ್ಮಹತ್ಯೆ ಮಾಡಿಕೊಳ್ಳುವ ಜೋಡಿಗಳ ಸುದ್ದಿಯಿಲ್ಲದ ದಿನಪತ್ರಿಕೆಗಳೆ ಇಲ್ಲ. ಆತ್ಮಹತ್ಯೆ ಮಾಡಿಕೊಳ್ಳುವವರ ಪಟ್ಟಿಗೆ ಸೇರ್ಪಡೆಗೊಳ್ಳುವ ವಿಷಯಗಳೆಂದರೆ ಪರೀಕ್ಷೆಯಲ್ಲಿ ಫೇಲು, ತಂದೆ ತಾಯಿಗಳ ಬುದ್ಧಿಮಾತಿಗೆ ನೊಂದು, ಆನ್ಲೈನ್ ಜೂಜಾಟದಲ್ಲಿ ಹಣ ಕಳೆದುಕೊಂಡು, ಕೌಟುಂಬಿಕ ಸಂಸಾರದಲ್ಲಿ ಸಾಕಾಗಿ, ಮಾನಸಿಕ ಒತ್ತಡವ ತಂದುಕೊಂಡು ಒಂಟಿತನದಲ್ಲಿ ಬೆಂದು ಆತ್ಮಹತ್ಯೆಯನ್ನು ಆಪ್ಪಿಕ್ಕೊಳ್ಳುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಾ ಹೋಗುತ್ತಿದೆ. ಕಳೆದ ಒಂದು ದಶಕದಲ್ಲಿ ದೇಶದಲ್ಲಿಯೇ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆಯಲ್ಲಿ 12ನೇ ಸ್ಥಾನದಲ್ಲಿದ್ದ ಕರ್ನಾಟಕವು ಎರಡನೇ ಸ್ಥಾನಕ್ಕೆ ಜಿಗಿದಿರುವುದು ಇದಕ್ಕೆ ನಿದರ್ಶನವಾಗಿದೆ.

ಪ್ರೀತಿಗೆ ಜಾತಿಯ ಅಡ್ಡಗೋಡೆ, ಪ್ರೀತಿಯ ವೈಫಲ್ಯ, ತೀರಿಸಲಾರದ ಸಾಲದ ಭಾದೆ, ಕೌಟುಂಬಿಕ ಕಲಹ, ನಿರುದ್ಯೋಗ, ಒಂಟಿತನ, ಆರೋಗ್ಯ ಸಮಸ್ಯೆಗಳು, ಜೀವನದಲ್ಲಿ ಅಂದುಕೊಂಡ ಹಾಗೆ ಯಶಸ್ಸು ಸಿಗದಾಗ, ಆಧುನಿಕ ಒತ್ತಡದ ಜೀವನ ಶೈಲಿಯಿಂದ ಆತ್ಮಹತ್ಯೆಗಳ ಕಾರಣಗಳ ಪಟ್ಟಿ ದಿನೇ ದಿನೇ ಬೆಳೆಯುತ್ತಾ ಹೋಗುತ್ತಿದೆ. ಅಷ್ಟೇ ಅಲ್ಲದೆ ಸಮಾಜವು ಕೂಡ ಆತ್ಮಹತ್ಯೆಗೆ ಕೆಲವೊಮ್ಮೆ ಪ್ರಚೋದನೆಯನ್ನು ಒದಗಿಸಿಕೊಡುತ್ತದೆ.

**ಹೀಗೆ ಸಾಮಾಜಿಕ ಪೆಡಂಭೂತವಾಗಿ ಕಾಡುವ ಕುಟುಂಬದ ಮಾನಸಿಕ ಆರೋಗ್ಯದ ಸ್ವಾಸ್ಥ್ಯವನ್ನು ಅದಗೆಡಿಸುವ ಆತ್ಮಹತ್ಯೆಯನ್ನ ಕಡಿಮೆ ಮಾಡುವ ಪರಿಹಾರೋಪಾಯಗಳನ್ನ ನೋಡೋಣ.**

1. ಅತಿಯಾದ ಒಂಟಿತನ ಒಳ್ಳೆಯದಲ್ಲ ಹಾಗಾಗಿ ಒಂಟಿಯಾಗಿರಬೇಡಿ ಸಮಾಜದೊಂದಿಗೆ ಬೆರೆಯಿರಿ.
2. ನಿಮ್ಮ ಸಮಸ್ಯೆಗಳನ್ನ ಹಂಚಿಕೊಳ್ಳಲು ಒಳ್ಳೆಯ ಸ್ನೇಹಿತರನ್ನು ಸಂಪಾದಿಸಿ.
3. ಪದೇ ಪದೇ ಕೌಟುಂಬಿಕ ಕಲಹಗಳಾಗುತ್ತಿದ್ದರೆ ಅದೇ ದೊಡ್ಡ ಸಮಸ್ಯೆ ಎಂದು ಕೊರಗಬೇಡಿ ಸೂಕ್ತ ಆಪ್ತ ಸಮಾಲೋಚನೆ ತೆಗೆದುಕೊಳ್ಳಿ.
4. ಯಾವುದನ್ನೂ ಅತಿಯಾಗಿ ತೆಗೆದುಕೊಳ್ಳಬೇಡಿ ಸೋಲು ಅಥವಾ ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಧೈರ್ಯವನ್ನು ಬೆಳೆಸಿಕೊಳ್ಳಿ.
5. ನಿಮ್ಮೊಳಗೆ ನೀವೇ ಮಾತನಾಡಿ ನೀವುಗಳು ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಕನಿಷ್ಠರಾಗಬೇಡಿ ನಿಮಗೂ ಸಮಾಜದಲ್ಲಿ ಒಂದು ಐಡೆಂಟಿಟಿ ಇದೆ.
6. ಪ್ರತಿಯೊಬ್ಬರಿಗೂ ಸಮಸ್ಯೆ ಇದ್ದೇ ಇರುತ್ತದೆ ನನಗೊಬ್ಬನಿಗೆ ಇರುತ್ತದೆ ಎಂಬ ಭಾವನೆ ನಿನ್ನದಾಗಿದ್ದರೆ ತೆಗೆದುಹಾಕಿಬಿಡಿ. ಮನುಷ್ಯನಾಗಿ ಹುಟ್ಟಿದ ಮೇಲೆ ಪ್ರತಿಯೊಬ್ಬರಿಗೂ ಸಮಸ್ಯೆಗಳು ಬರುತ್ತವೆ ಹಾಗೂ ಪರಿಹಾರಗಳು ಕೂಡ ಸಿಗುತ್ತವೆ ಸ್ವಲ್ಪ ಸಮಾಧಾನದಿಂದ ಇರಬೇಕಷ್ಟೇ.
7. ಅಂದುಕೊಂಡದ್ದು ಆಗಲಿಲ್ಲ ಇನ್ನು ನನ್ನ ಜೀವನವೇ ಮುಗಿತು ಹೋಯಿತು ಎಂಬ ನಿರಾಸೆಗೆ ಬರಬೇಡಿ. ಅವನಿ ಲೇಖರಾ 11ನೇ ವಯಸ್ಸಿನಲ್ಲಿ ಕಾರು ಅಪಘಾತದಲ್ಲಿ ತನ್ನ ಕಾಲುಗಳನ್ನು ಕಳೆದುಕೊಂಡಳು ಆದರೆ ಭರವಸೆಯನ್ನಲ್ಲ. ಪ್ಯಾರಾ ಒಲಂಪಿಕ್ನಲ್ಲಿ ಸತತ 2 ಬಾರಿ ಚಿನ್ನದ ಪದಕ ಗೆದ್ದು ಬೀಗಿದಳು.
8. ಆರ್ಥಿಕ ಮುಗ್ಗಟ್ಟು ಉಂಟಾದಾಗ ಸಾವಧಾನವಾಗಿ ಪರಿಹಾರಗಳನ್ನು ಕಂಡುಕೊಳ್ಳಿ. ಸಾಲ ಮುಕ್ತರಾಗಲು ಬದುಕಿಗೆ ವಿದಾಯ ಹೇಳುವುದು ಸರಿಯಲ್ಲ. ಸಾಲ ನೀಡಿದವರ ಸಮಯ ಕೇಳಿ ಹಾಗೂ ಪರ್ಯಾಯ ಪರಿಹಾರಗಳನ್ನು ಕಂಡುಕೊಳ್ಳಿ.
9.ಹದಿಹರೆಯದವರಲ್ಲಿ ಸಾಮಾಜಿಕ–ಭಾವನಾತ್ಮಕ ಜೀವನ ಕೌಶಲ್ಯಗಳನ್ನು ಬೆಳೆಸುವುದು; ಮತ್ತು ಆತ್ಮಹತ್ಯಾ ನಡವಳಿಕೆಗಳಿಂದ ಪ್ರಭಾವಿತರಾದ ಯಾರನ್ನಾದರೂ ಮೊದಲೇ ಗುರುತಿಸಿ, ನಿರ್ಣಯಿಸಿ, ಅವರನ್ನು ಅದರಿಂದ ಹೊರಬರಲು ಸಹಾಯ ಮಾಡಬೇಕು.

ಅಂದರೆ ವ್ಯಕ್ತಿ ಸೋತಾಗ ಅವನನ್ನ ಸಂತೈಸುವುದನ್ನು ಬಿಟ್ಟು ಮತ್ತಷ್ಟು ನೋವು ನೀಡುತ್ತಾರೆ. ಬದುಕಿನಲ್ಲಿ ಪ್ರಪಾತಕ್ಕೆ ಬಿದ್ದಾಗ ಮೇಲೆತ್ತದೆ ಮತ್ತಷ್ಟು ಕಲ್ಲು ತುಂಬಿ ಮೇಲೇಳದಂತೆ ಸಮಾಧಿ ಮಾಡುತ್ತಾರೆ. ಸಮಸ್ಯೆಗಳನ್ನು ನೆರೆಹೊರೆ ಯವರು ಸ್ನೇಹಿತರೊಂದಿಗೆ ಹೇಳಿಕೊಂಡಾಗ ಅವುಗಳಿಗೆ ಪರಿಹಾರ ಗಳನ್ನು ಸೂಚಿಸದೆ ಮತ್ತೊಬ್ಬರೊಡನೆ ಆಡಿಕೊಳ್ಳುವುದು ಮತ್ತಷ್ಟು ಅವರನ್ನು ಕುಗ್ಗಿಸುತ್ತದೆ. ಸೂಕ್ಷ್ಮ ಮನಸ್ಸಿನ ವ್ಯಕ್ತಿಗಳ ಭಾವನೆಗಳಿಗೆ ಪೆಟ್ಟುಕೊಟ್ಟು ಅವರನ್ನು ಕತ್ತಲ ಕೂಪಕ್ಕೆ ದೂಡುವವರ ಸಂಖ್ಯೆಯು ಕಡಿಮೆ ಏನಿಲ್ಲ. ಹೀಗೆ ನಮ್ಮ ಸುತ್ತಮುತ್ತಲಿನವರ ಮನಸ್ಥಿತಿಗಳು ಮತ್ತಷ್ಟು ಮನಸ್ಸುಗಳನ್ನು ಆತ್ಮಹತ್ಯೆಗೆ ಕಾರಣವಾಗಿ ದಿನೇ ದಿನೇ ಈ ರೀತಿಯ ದುರ್ಘಟನೆಗಳು ನಡೆಯುತ್ತಿವೆ.

ಪ್ರತಿ ವರ್ಷ ಪ್ರಪಂಚದಲ್ಲಿ 7,20,000 ಜನ ಆತ್ಮಹತ್ಯೆಯಿಂದ ಜಗತ್ತಿನಿಂದ ದೂರವಾಗುತ್ತಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ ವರದಿ ಮಾಡಿದೆ. National crime records bureau (NCRB) 2024ರ ವರದಿಯ ಪ್ರಕಾರ ಭಾರತದಲ್ಲಿ ಪ್ರತಿ ವರ್ಷ ಒಂದು ಲಕ್ಷ ಜನ ಹಾಗೂ ದಿನವೊಂದಕ್ಕೆ 28 ಹಾಗೂ ಕರ್ನಾಟಕದಲ್ಲಿ 32 ವ್ಯಕ್ತಿಗಳು ಆತ್ಮಹತ್ಯೆಗೆ ಈಡಾಗುತ್ತಾರೆ. ಹೀಗೆ ಪ್ರತಿ ವರ್ಷವೂ ಸಾವನ್ನಪ್ಪವರ ಸಂಖ್ಯೆ ಹೆಚ್ಚುತ್ತಾ ಹೋಗುತ್ತಿದೆ ಹಾಗಾಗಿ ಆತ್ಮಹತ್ಯೆಯನ್ನು ಮಾಡಿಕೊಳ್ಳುವುದನ್ನು ನಿಯಂತ್ರಿಸುವ ಕೆಲಸ ಅತಿ ಜರೂರಿದೆ.

ಆತ್ಮಹತ್ಯೆತಡೆಗೆ ಸರಕಾರ ಮತ್ತು ಸಮುದಾಯದ ಸಹಭಾಗಿತ್ವ ರಾಜ್ಯ ಸರ್ಕಾರವು ರಾಷ್ಟ್ರೀಯ ಟೆಲಿ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿ ಟೆಲಿ ಮನಸ್ ಎಂಬ 14416 ಸಂಖ್ಯೆಯ ಉಚಿತ ಸಹಾಯವಾಣಿ ಆರಂಭಿಸಿದೆ. ಯಾರಾದರೂ ವ್ಯಥೆಗೆ ಒಳಪಟ್ಟವರು, ಪರೀಕ್ಷಾ ಒತ್ತಡಕೊಳ್ಳಗಾದವರು, ಕೌಟುಂಬಿಕ ಸಮಸ್ಯೆಗೊಳಗಾದವರು, ಆತ್ಮಹತ್ಯೆ ಆಲೋಚನೆ ಮಾಡುವರು, ಮಾದಕ ವಸ್ತು ವ್ಯಸನಿಗಳು, ಸಂಬಂಧಗಳ ಸಮಸ್ಯೆಯಲ್ಲಿ ಸಿಲುಕಿರುವವರು, ಜ್ಞಾಪಕ ಶಕ್ತಿ ತೊಂದರೆ ಉಳ್ಳವರು, ಆರ್ಥಿಕ ಒತ್ತಡದಲ್ಲಿ ಇರುವವರು ಅಥವಾ ಇತರೆ ಯಾವುದೇ ಮಾನಸಿಕ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರು ಸಹಾಯವಾಣಿಗೆ ಕರೆ ಮಾಡಿ ಸೂಕ್ತ ಪರಿಹಾರ ಕಂಡುಕೊಳ್ಳಬಹುದು. ಜೊತೆಗೆ ಕರ್ನಾಟಕ ರಾಜ್ಯ ಸರ್ಕಾರವು ಸುರಕ್ಷಾ ಎಂಬ ಯೋಜನೆ ಜಾರಿಗೆ ತಂದಿದೆ.

ಆತ್ಮಹತ್ಯೆಯು ಸಕೀರ್ಣ ವಿಷಯವಾಗಿರುವುದರಿಂದ ಸುರಕ್ಷಾ ಯೋಜನೆ ಅಡಿಯಲ್ಲಿ ಬಹುಮಾದರಿಯ ತಂತ್ರವನ್ನು ಬಳಸಲಾಗುತ್ತದೆ. ಸುರಕ್ಷಾ ಯೋಜನೆಯು ಆತ್ಮಹತ್ಯೆ ತಡೆಗಟ್ಟುವಿಕೆಗಾಗಿ ಸಮಾಜದ ವಿವಿಧ ವಲಯಗಳ ನಡುವಿನ ಸಹಯೋಗಕ್ಕೆ ಆದ್ಯತೆ ನೀಡುತ್ತದೆ. ಪಂಚಾಯತ್‌ಗಳಾದ್ಯಂತ ಸ್ಥಾಪಿಸಲಾದ ಸಮುದಾಯ ಆಧಾರಿತ ಕಣ್ಗಾವಲು ತಂಡಗಳು (CBST) ಯೋಜನೆಯ ತಂಡಗಳಿವೆ. ಈ ತಂಡಗಳಲ್ಲಿ ಆಶಾ ಕಾರ್ಯಕರ್ತೆಯರು, ಅಂಗನವಾಡಿ ಶಿಕ್ಷಕರು, ಪಂಚಾಯತ್ ಸದಸ್ಯರು ಮತ್ತು ವಿಶೇಷ ತರಬೇತಿ ಪಡೆಯುವ ಸ್ವಯಂಸೇವಕರು ಸೇರಿದ್ದಾರೆ. ರಕ್ಷಕರಾಗಿ ಕಾರ್ಯನಿರ್ವಹಿಸುತ್ತಾ, ಅವರು ತಮ್ಮ ಸಮುದಾಯಗಳಲ್ಲಿನ ಆತ್ಮಹತ್ಯೆ ಅಪಾಯಗಳನ್ನು ರಕ್ಷಣಾತ್ಮಕ ಅಂಶಗಳಿಂದ ಎಚ್ಚರಿಕೆಯಿಂದ ಮೇಲ್ವಿಚಾರಣೆ ಮಾಡುತ್ತಾರೆ ಮತ್ತು ಪ್ರತಿಕ್ರಿಯಿಸುತ್ತಾರೆ. ಹಾಗಾಗಿ ಸಮುದಾಯವು ಇವರಿಗೆ ಮಾಹಿತಿಯನ್ನು ನೀಡಿ ಆತ್ಮಹತ್ಯೆ ತಡೆಗೆ ಸಹಾಯ ಮಾಡಿ ಆತ್ಮಹತ್ಯೆ ಮುಕ್ತ ಸಮಾಜವನ್ನು ನಿರ್ಮಿಸಬೇಕಿದೆ.

Suicide is not solution ಮಾನವ ಜನ್ಮ ದೊಡ್ಡದು ಅದನ್ನು ಹಾಳು ಮಾಡಿಕೊಳ್ಳದಿರಿ ಹುಚ್ಚಪ್ಪ ಗಳಿರ ಎಂದು ಪುರಂದರದಾಸರು ಹೇಳಿದ್ದಾರೆ. ಈ ಮನುಷ್ಯ ಜೀವನವು ದೇವರು ಕೊಟ್ಟ ಅತಿ ದೊಡ್ಡವರ ಅದನ್ನು ಇರುವವರೆಗೂ ಬಳಸಿಕೊಳ್ಳಬೇಕು ಉಳಿಸಿಕೊಳ್ಳಬೇಕು. ಬದುಕು ಎಲ್ಲರಿಗೂ ಒಮ್ಮೊಮ್ಮೆ ಬೇಸರವು ಬಾರವೂ ಇನ್ನೇನು ಬದುಕು ಮುಗಿದು ಹೋಯಿತು ಎಂದೆನಿಸಿ ಬಿಡುತ್ತೆ ಆಗ ನಾವು ಸ್ವಲ್ಪ ಸಮಾಧಾನದಿಂದ ಇರಬೇಕು ಬದುಕನ್ನು ಕೊನೆಗೊಳಿಸುವುದಕ್ಕಿಂತ ಹೊಸ ಬದುಕನ್ನು ಪುನರಾರಂಭಿಸುವ ಕುರಿತು ಆಲೋಚಿಸಬೇಕು.

ಪ್ರತಿಯೊಬ್ಬರಿಗೂ ಕೂಡ ಜೀವನದಲ್ಲಿ ಆತ್ಮಹತ್ಯೆ ಯೋಚನೆ ಬಂದೇ ಬರುತ್ತದೆ ಆದರೆ ಕೆಲವೊಬ್ಬರು ಮಾತ್ರ ಆತ್ಮಹತ್ಯೆಯನ್ನು ಅಪ್ಪಿಕೊಳ್ಳುತ್ತಾರೆ ಇನ್ನುಳಿದವರು ಇದೇನು ದೊಡ್ಡ ಮಹಾ ಎಂದು ಮುಂದೆ ಸಾಗುತ್ತಾರೆ ಬದುಕಿ ನಲ್ಲಿ ಯಶಸ್ಸು ಗಳಿಸುತ್ತಾರೆ. ಎಂತೆಂತವರೋ ಎದೆಯುಬ್ಬಿಸಿ ಜೀವನ ಮಾಡುತ್ತಿರುವಾಗ ಒಳ್ಳೆಯವರು ಕ್ಷುಲ್ಲಕ ಕರಣಕ್ಕಾಗಿ ಆತ್ಮಹತ್ಯೆ ಮೂಲಕ ಅಮೂಲ್ಯ ಜೀವ ಕಳೆದುಕೊಳ್ಳಬಾರದು.

ಈಸಬೇಕು ಇದ್ದು ಜಯಿಸಬೇಕು ಎಂಬ ದಾಸರವಾಣಿಯನ್ನು ಸದಾ ನೆನಪನ್ನಿಟ್ಟುಕೊಂಡು ಜೀವನದಲ್ಲಿ ಎದುರಾಗುವ ಸೋಲು ಸವಾಲುಗಳಿಗೆ ಎದೆಗುಂದದೆ ಮುನ್ನುಗ್ಗಬೇಕು.ಸವಾಲುಗಳಿಂದ ಕೂಡಿದ ನೋವುಭರಿತ ಸನ್ನಿವೇಶಗಳಿಗೆ ಸಾವು ಒಂದೇ ಅಂತಿಮ ಪರಿಹಾರವಲ್ಲ. ಇಲ್ಲಿ ಯಾವುದು ಶಾಶ್ವತವಲ್ಲ ಕಷ್ಟವಾಗಿರಲಿ ಸುಖವಾಗಿರಲಿ ಆ ಕ್ಷಣವನ್ನು ದಾಟಬೇಕಷ್ಟೇ, ಎಲ್ಲವೂ ತಿಳಿಯಾಗುತ್ತದೆ. ಕತ್ತಲ ನಂತರ ಬೆಳಕು ಮೂಡಿ ಬರಲೇಬೇಕು...

# ದಿವಂಗತ ಮಾಜಿ ಸಿಎಂ ಎಸ್.ಎಂ. ಕೃಷ್ಣಗೆ ಸಿಎಂ ಸಿದ್ದರಾಮಯ್ಯನವರಿಂದ ಅಂತಿಮ ನಮನ


ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಎಂ.ಕೃಷ್ಣ ಅವರ ಅಂತಿಮ ಸಂಸ್ಕಾರದಲ್ಲಿ ಪಾಲ್ಗೊಂಡು ಬುಧವಾರ ಅಂತಿಮ ನಮನ ಸಲ್ಲಿಸಿದರು.

■ **ಹಂಪಿ ಟೈಮ್ಸ್ ಬೆಂಗಳೂರು :** ಎಸ್.ಎಂ ಕೃಷ್ಣ ಅವರೊಬ್ಬ ದೂರದೃಷ್ಟಿವುಳ್ಳ ಮುತ್ಸದ್ದಿ ರಾಜಕಾರಣಿ. ಕರ್ನಾಟಕ ಮತ್ತು ದೇಶದ ರಾಜಕಾರಣದಲ್ಲಿ ದೀರ್ಘ ಕಾಲ ತಮ್ಮನ್ನು ತೊಡಗಿಸಿಕೊಂಡಿದ್ದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಸದಾಶಿವನಗರದಲ್ಲಿರುವ ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ವಿದೇಶಾಂಗ ಸಚಿವರಾಗಿದ್ದ ಎಸ್.ಎಂ ಕೃಷ್ಣರವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು ಕುಟುಂಬದವರಿಗೆ ಸಾಂತ್ವನ ಹೇಳಿದ ನಂತರ ಮಾಧ್ಯಮ ದವರೊಂದಿಗೆ ಮಾತನಾಡಿದರು.

**ಬೆಂಗಳೂರನ್ನು ಸಿಂಗಾಪುರ ಮಾಡಬೇಕೆಂಬ ಕನಸು :** ಸುಮಾರು ಆರು ದಶಕಗಳಿಗೂ ಹೆಚ್ಚು ಕಾಲ ಸಾರ್ವಜನಿಕ ಜೀವನದಲ್ಲಿದ್ದ ಅವರು, ಸಮರ್ಥ ಆಡಳಿಗಾರರು. ವಿಧಾನಸಭೆ, ವಿಧಾನ ಪರಿಷತ್ತು, ಲೋಕಸಭೆ ರಾಜ್ಯಸಭೆಗಳಲ್ಲಿ ಸದಸ್ಯರಾಗಿದ್ದ ಕೆಲವೇ ರಾಜಕಾರಣಿಗಳಲ್ಲಿ ಇವರೂ ಒಬ್ಬರು. ಈ ರಾಜ್ಯದ ಮುಖ್ಯಮಂತ್ರಿ ಯಾಗಿದ್ದರು. ವಿಧಾನಸಭೆಯ ಅಧ್ಯಕ್ಷರೂ ಆಗಿದ್ದರು. ಐದು ವರ್ಷಗಳ ಕಾಲ ರಾಜ್ಯದ ಮುಖ್ಯಮಂತ್ರಿಯಾಗಿ ಬೆಂಗಳೂರನ್ನು ಸಿಂಗಾಪುರ ಮಾಡಬೇಕೆಂಬ ಕನಸು ಕಂಡಿದ್ದರು. ಅವರ ಕನಸು ನನಸಾಗಲಿಲ್ಲ. ನಾಲ್ಕೂವರೆ ವರ್ಷಗಳ ಕಾಲ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಐ. ಟಿ ಬೆಳವಣಿಗೆಗೆ ಅಪಾರ ಕೊಡುಗೆಯನ್ನು ಕೊಟ್ಟಿದ್ದಾರೆ. ಬೆಂಗಳೂರು ನಗರ ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿ ಕೊಂಡಿದ್ದರೆ ಅದಕ್ಕೆ ಎಸ್.ಎಂ.ಕೃಷ್ಣ ಅವರು ಕಾರಣ. ಬೆಂಗಳೂರು ನಗರ ಭಾರತದ ಸಿಲಿಕಾನ್ ವ್ಯಾಲಿ ಆಗಬೇಕಾದರೆ ಎಸ್.ಎಂ.ಕೃಷ್ಣ ಅವರ ಕೊಡುಗೆ ಅಪಾರವಾಗಿದೆ ಎಂದರು.

**ಸವಾಲುಗಳನ್ನು ಜಾಣ್ಮೆಯಿಂದ ನಿರ್ವಹಿಸಿದ್ದರು**


ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಅನೇಕ ಸವಾಲು ಗಳನ್ನು ಎದುರಿಸಬೇಕಾಗಿತು. ಬರಗಾಲವಿತ್ತು, ಡಾ: ರಾಜ್ ಕುಮಾರ್ ಅವರನ್ನು ಕಾಡುಗಳ್ಳ ವೀರಪ್ಪನ್ ಅಪಹರಿಸಿದ್ದ ಪ್ರಕರಣ ಹಾಗೂ ಕಾವೇರಿ ವಿವಾದ ಗಳಲ್ಲಿ ಜಾಣ್ಮೆಯಿಂದ ವ್ಯವಹರಿಸಿದ್ದರು. ಮಹಾ ರಾಷ್ಟದ ರಾಜ್ಯಪಾಲರಾಗಿ ಕಾರ್ಯನಿರ್ವ ಹಿಸಿದ್ದರು.ಆ ಸಂದರ್ಭ ದಲ್ಲಿ ಕಾಂಗ್ರೆಸ್ ಸೇರುವ ಬಗ್ಗೆ ತಿಳಿಸಲೆಂದು ಮಹಾ ರಾಷ್ಟ್ರಕ್ಕೆ ಹೋಗಿ ಭೇಟಿಯಾದಾಗ ನೀವು ಕಾಂಗ್ರೆಸ್ ಸೇರುವುದು 'ಐತಿಹಾಸಿಕ ಅಗತ್ಯ' ಎಂದಿದ್ದರು ಎಂದು ಮುಖ್ಯಮಂತ್ರಿಗಳು ಸ್ಮರಿಸಿದರು.

**ಸೌಮ್ಯ ಸ್ವಭಾವದ ಸಜ್ಜನ ರಾಜಕಾರಣಿ**

ಕೃಷ್ಣ ಅವರು ಸೌಮ್ಯ ಸ್ವಭಾವದ ಸಜ್ಜನ ರಾಜಕಾರಣಿ. ಎಂದಿಗೂ ಸೇಡಿನ, ದ್ವೇಷದ ರಾಜಕಾರಣ ಮಾಡಿರಲಿಲ್ಲ. ದೀರ್ಘ ಕಾಲ ಕರ್ನಾಟಕದ, ದೇಶದ ಜನರ ಸೇವೆಯನ್ನು ಮಾಡಿದ್ದಾರೆ. ಅವರ ಸಾವಿನಿಂದ ಒಬ್ಬ ಉತ್ತಮ ವಾಗ್ಮಿ, ಹಾಗೂ ಸಂಸದೀಯಪಟುವನ್ನು ಕಳೆದುಕೊಂಡಂತಾಗಿದೆ. ರಾಜಕೀಯವಾಗಿ ದೊಡ್ಡ ನಷ್ಟಗುಂಟಾಗಿದೆ. ಅವರ ಆತ್ಮಕ್ಕೆ ಚಿರಶಾಂತಿ ದೊರೆ ಯಲಿ ಎಂದು ಆಶಿಸುತ್ತೇನೆ. ಅವರ ಕುಟುಂಬ ಮತ್ತು ಅಭಿಮಾನಿಗಳಿಗೆ ಅವರ ಸಾವಿನ ದುಃಖವನ್ನು ಭರಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದರು.



## ಆನಂದ ಬಾಣ




**ನಿಮ್ಮ ಬೆರಳ ತುದಿಯಲ್ಲಿ ಜಿಲ್ಲೆಯ ಸಮಗ್ರ ಸುದ್ದಿ ಹಾಗೂ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಗಳಿಸಲು ಕೆಳಗಿನ ಕ್ಯೂರ್ ಕೊಡ್ ಸ್ಕ್ಯಾನ್ ಮಾಡಿ ಹಂಪಿ ಟೈಮ್ಸ್ ಮಾರ್ಗದರ್ಶಿ ಓದಿರಿ**

HAMPI TIMES (G-50)
WhatsApp group

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
HAMPI TIMES VIJAYANAGARA

**SSLC ಈ ಬಾರಿ ಫಲಿತಾಂಶ ನಮ್ಮದೆ**

**10ನೇ ತರಗತಿ ವಿದ್ಯಾರ್ಥಿಗಳಿಗೆ ವಿಜ್ಞಾನ ಚಿತ್ರ ಸ್ಪರ್ಧೆ**
**ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಲು ಒಂದು ಉತ್ತಮ ಅವಕಾಶ!**

ವಿಜ್ಞಾನ ಕಲಿಕೆಯು ಕೇವಲ ಪಠ್ಯಪುಸ್ತಕ ಓದುವುದು ಮತ್ತು ಪರೀಕ್ಷೆ ಬರೆಯುವುದಕ್ಕೆ ಸೀಮಿತವಲ್ಲ. ಅದು ಸೃಜನಾತ್ಮಕತೆಯನ್ನು ಬೆಳೆಸುವ ಮತ್ತು ತತ್ವಗಳನ್ನು ತಾತ್ವಿಕವಾಗಿ ಅರ್ಥಮಾಡಿಕೊಳ್ಳುವ ಒಂದು ಪ್ರಕ್ರಿಯೆ. 10ನೇ ತರಗತಿ ವಿದ್ಯಾರ್ಥಿಗಳಿಗೆ, ಪರೀಕ್ಷೆಯ ಸಿದ್ಧತೆಯನ್ನು ಬೆಂಬಲಿಸಲು ಮತ್ತು ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು **ಹಂಪಿ ಟೈಮ್ಸ್ ಬಳಗ**ದಿಂದ "**ವಿಜ್ಞಾನ ಚಿತ್ರ ಸ್ಪರ್ಧೆ**" ಆಯೋಜಿಸಲಾಗಿದೆ.

-: ಈ ವಾರದ (13-12-2024) ಚಿತ್ರ ಸ್ಪರ್ಧೆ - 3 : -
ನೀರಿನ ವಿದ್ಯುತ್ ವಿಭಜನೆಯಲ್ಲಿ ಉಪಯೋಗಿಸುವ ಉಪಕರಣದ ಅಂದವಾದ ಚಿತ್ರವನ್ನು ಬಿಡಿಸಿ ಭಾಗಗಳನ್ನು ಗುರುತಿಸಿ ?

-: ಸೂಚನೆಗಳು :-

1. ವಿದ್ಯಾರ್ಥಿಯು 2023-24 ಶೈಕ್ಷಣಿಕ ಸಾಲಿನಲ್ಲಿ 10ನೇ ತರಗತಿ ವಿದ್ಯಾಭ್ಯಾಸ ಮಾಡುತ್ತಿರಬೇಕು.
2. ಶಿಕ್ಷಕರ/ಶಿಕ್ಷಕಿಯರ ಸಮ್ಮುಖದಲ್ಲಿ ನಿಗದಿತ ಸಮಯ (10 ನಿಮಿಷ) ದಲ್ಲಿ ಶುಕ್ರವಾರದಂದು ಶಾಲೆಯಲ್ಲಿ ಚಿತ್ರವನ್ನು A4 ಹಾಳೆಯ ಅರ್ಧ ಭಾಗದಲ್ಲಿ ಪೆನ್ಸಿಲ್ ನಿಂದ ಬಿಡಿಸಬೇಕು
3. ಆಯಾ ಶಾಲೆಯಲ್ಲಿ ಆಯ್ಕೆಯಾದ ಅತ್ಯುತ್ತಮವಾದ ಒಂದು ಚಿತ್ರ ಮಾತ್ರ ಗುರುಗಳು ಆಯ್ಕೆ ಮಾಡಿ , ಮುಖ್ಯ ಶಿಕ್ಷಕರು/ಶಿಕ್ಷಕರ ಸಹಿಯೊಂದಿಗೆ ವಾಟ್ಸ್‌ಪ್ ನಂಬರಿಗೆ ಕಳುಹಿಸಬೇಕು. ಹೆಚ್ಚಿನ ಚಿತ್ರಗಳಿಗೆ ಅವಕಾಶವಿರುವುದಿಲ್ಲ.
4. ಆಯ್ಕೆಯಾದ ಚಿತ್ರದೊಂದಿಗೆ ವಿದ್ಯಾರ್ಥಿಯ ಫೋಟೊ ಹೆಸರು, ಶಾಲೆಯ ವಿಳಾಸ ಮತ್ತು ವಿಜ್ಞಾನ ಮಾರ್ಗದರ್ಶಿ ಶಿಕ್ಷಕರ ಹೆಸರನ್ನು ತಪ್ಪದೇ ಸ್ಪಷ್ಟವಾಗಿ ನಮೂದಿಸಬೇಕು.
5. ತಡವಾಗಿ ಕಳುಹಿಸಿದ ಮತ್ತು ಮಾಹಿತಿ ಕೊರತೆ ಇರುವ ಚಿತ್ರಗಳನ್ನು ಪರಿಗಣಿಸಲಾಗುವುದಿಲ್ಲ.
6. ಆಯ್ಕೆಯಾದ ಅತ್ಯುತ್ತಮವಾದ ಒಂದು ಚಿತ್ರವನ್ನು ಫೋಟೋ ಸಹಿತ ಹಂಪಿ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.
7. ಆಯ್ಕೆ ತಂಡದ ತೀರ್ಮಾನವೇ ಅಂತಿಮವಾಗಿರುತ್ತದೆ.
8. ಮಕ್ಕಳ ಉತ್ತಮ ಶೈಕ್ಷಣಿಕ ಫಲಿತಾಂಶಕ್ಕಾಗಿ ಮುಖ್ಯಗುರುಗಳು ಹಾಗೂ ಶಿಕ್ಷಕರು ನಮ್ಮೊಂದಿಗೆ ಕೈಜೋಡಿಸುತ್ತೀರೆಂಬ ಸದಾಶಯ ನಮ್ಮದು.

ವಿ.ಸೂ: ಶುಕ್ರವಾರ ಸಂಜೆ 6 ಗಂಟೆಯೊಳಗೆ ಅತ್ಯುತ್ತಮ ಚಿತ್ರದ ಫೋಟೋ ತೆಗೆದು ಮೊಬೈಲ್ ಸಂಖ್ಯೆ 9972603099 ಗೆ ಕಳುಹಿಸಬೇಕು. ಹೆಚ್ಚಿನ ಚಿತ್ರಗಳಿಗೆ ಅವಕಾಶವಿರುವುದಿಲ್ಲ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9448633038

scan to read epaper.hampitimes.com

**ಹಂಪಿ ಟೈಮ್ಸ್ ಬಳಗ, ವಿಜಯನಗರ**

visit our website at www.hampitimes.com / epaper.hampitimes.com

**SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ**
HAMPI TIMES MARGADARSHI
ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು
ಹಂಪಿ ಟೈಮ್ಸ್ ಇ-ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಬಳಿಗೆ ನಿನ್ನ ಶಿಲ್ಪಿ
ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಇಂಗ್ಲಿಷ್

## Poem : The Ballad of the Tempest

**Most important extracts (3 Marks)**

**1. "We were crowded in the cabin not a soul would dare to sleep."**
a) Who does 'we' refer here?
Ans: 'We' refers here the group of sailors in the ship.
b) Why were not they daring to sleep?
Ans: The violent storm was blowing over the sea at night.
c) What does 'dare'mean?
Ans: 'Dare' means, have challenge or courage.

**2. "So we shuddered there in silence, For the stoutest held his breath."**
a) Who does 'we' refer to?
Ans: We refers to the sailors in the ship.
b) Why did they hold their breath?
Ans: Because the ship is going to be broken apart.
c) What does 'stoutest' in this context?
Ans: Stoutest means determined bravely in this context.

**3 "While the hungry sea was roaring, And the breakers talked with death."**
a) What does the word 'breakers' mean here?
Ans:The 'breakers' means large waves moving towards the land.
b) What is the figure of speech used in the line'the hungry sea was roaring'?
Ans: Personification
c) What does the line suggest 'hungry sea was roaring'?
Ans: Violent storms were ready to swallow anything.

www.hampitimes.com - Hampi Times Margadarshi

**4. "We are lost! The captain shouted."**
A) Who does 'we'refer to?
Ans: The sailors in the ship.
b) Why did the captain say so?
Ans: The captain was afraid that the ship would be torn by the fierce storm.
c) What was the reaction of his daughter?
Ans: Holding her father's hand calmly asked if God would protect them on the land, would he not protect them on the sea.

**5. "Isn't God upon the ocean, Just the same as on the land?"**
a) Who asked this?
Ans: Daughter of the captain of the ship asked this.
b) Why did she ask so?
Ans: The daughter had faith in God.
c) What was her faith in God?
Ans: If the God would protect on the land, would he not protect them on the sea.

**6. "Then we kissed the little maiden, And we spake in better cheer,"**
a) Who does 'we' refer to?
Ans: 'We' refers to the sailors of the ship.
b) Who was the little maiden?
Ans: Daughter of the captain of the ship.
c) Why did they kiss her?
Ans: The little girl brought back and instilled their hope that God would save them.

**ಉತ್ತಮ ಫಲಿತಾಂಶಕ್ಕೆ ಪಂಚ ಸೂತ್ರಗಳನ್ನ ಪಾಲಿಸಿ**
1. ಸಮಯ ನಿರ್ವಹಣೆ 2. ನಿಮ್ಮ ಗುರಿಯನ್ನು ನೆನೆಸಿಕೊಳ್ಳಿ 3. ಆರೋಗ್ಯ ನಿರ್ವಹಣೆ 4. ಶಾಂತ ಮನಸ್ಥಿತಿ ಇಟ್ಟುಕೊಳ್ಳಿ 5. ನಕಾರಾತ್ಮಕವಾಗಿ ಚಿಂತಿಸಬೇಡಿ

Prepared by : R.B.Grubasavaraj Asst Teacher. G.H.S.Basarakodu, H.B.Halli Taluk, Vijayanagara Dist

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ